ನೋಡುವ ಹಾಗೆ ಖಂಡಿತವಾಗಿ ಆಗುತ್ತದೆ. ಆದ್ದರಿಂದ ಈ ಪದ್ಧತಿ ಸರಿಯಲ್ಲ ಎನ್ನುವುದನ್ನು ಹೇಳಿದ್ದೇನೆ. ಆದರೆ ಇದನ್ನೇ ಇನ್ನೂ ಮುಂದುವರೆಸುವುದಾದರೆ ನನ್ನದೇನೂ ಅಭ್ಯಂತರವಿಲ್ಲ, ನೀವು ಮುಂದುವರೆಸಿಕೊಳ್ಳಿ. ಜನರಿಗೆಲ್ಲಾ ಒಳ್ಳೆಯ ಸೌಲಭ್ಯಗಳನ್ನು ಕಲ್ಪಿಸಿಕೊಡುತ್ತೇವೆ, ಸುಧಾರಣೆಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈಗಾಗಲೇ ಮಧ್ಯಾಹ್ನದ ಊಟದ ವ್ಯವಸ್ಥೆಯನ್ನು ಶಾಲಾ ಮಕ್ಕಳಿಗೆ ಮಾಡಿದ್ದೀರಿ. ಲಾಟರಿ ಟಿಕೇಟ್ ದುಡ್ಡಿನಲ್ಲಿ ಮಕ್ಕಳಿಗೆ ಊಟ ಹಾಕುತ್ತೇವೆಂದು ಹೇಳಿದ್ದಾರೆ. ಪಾಪದ ಹಣದಲ್ಲಿ ದಯವಿಟ್ಟು ಊಟ ಹಾಕಬೇಡಿ. ಏಕೆಂದರೆ ತಿಂದ ಊಟ ಆ ಮಕ್ಕಳ ಮೈಯಿಗೆ ಹಿಡಿಸಬೇಕು. ಆ ಮಕ್ಕಳ ಭವಿಷ್ಯ ಉದ್ದಾರವಾಗಬೇಕು. ಆ ಮಕ್ಕಳು ಬಹಳ ಬುದ್ಧಿವಂತರಾಗಿ ದೊಡ್ಡವರಾಗಬೇಕೆಂದರೆ ಲಾಟರಿ ಟಿಕೇಟ್ ಮಾರಿ ಬಂದಂಥ ಹಣದಿಂದ ಊಟ ಬೇಡ. ಏಕೆಂದರೆ ಇದನ್ನು ಬಹಳ ಮಕ್ಕಳು ಕೇಳಿರಲಿಲ್ಲ. ಶಾಲೆಗೆ ಮೇಸ್ಟ್ರನ್ನು ಕೊಡಿ ಎಂದು ನಿಮಗೆ ಕೇಳಿದ್ದರು, ಶಾಲೆಯಲ್ಲಿ ಕುಳಿತುಕೊಳ್ಳುವುದಕ್ಕೆ ಬೆಂಚು ಕೊಡಿ ಎಂದು ಕೇಳಿದ್ದರು, ಶಾಲೆಗಳಲ್ಲಿ ಪುಸ್ತಕಗಳನ್ನು ಕೊಡಿ ಎಂದು ಕೇಳಿದರು, ನೀವಂತೂ ಕೂಡ ಕೊಡಲಿಕ್ಕೆ ಆಗಲಿಲ್ಲ. ಕುಡಿಯುವ ನೀರನ್ನು ಕೊಡಿ ಎಂದು ಕೇಳಿದರೆ ಅದನ್ನು ನಿಮ್ಮಿಂದ, ಸರ್ಕಾರದಿಂದ ಕೊಡಲಿಕ್ಕೆ ಆಗಲಿಲ್ಲ. ಕೇಂದ್ರ ಸರ್ಕಾರ ಈಗ 60 ಸಾವಿರ ಕೋಟಿ ರೂಪಾಯಿಗಳನ್ನು ಪ್ರೈಮರಿ ಎಜ್ಯುಕೇಷನ್‌ಗೆ ನಿಗದಿ ಮಾಡಿ ಸ್ವಾತಂತ್ರ್ಯ ಬಂದ ಇತಿಹಾಸದಲ್ಲಿ ಪ್ರಥಮ ಬಾರಿಗೆ "ಸರ್ವಶಿಕ್ಷಾ ಅಭಿಯಾನ" ಯೋಜನೆ ಅಡಿಯಲ್ಲಿ ನಮ್ಮ ಹಳ್ಳಿಯ ಒಂದೊಂದು ಶಾಲೆಗೆ ಈಗಾಗಲೇ 40 ಸಾವಿರ, 50 ಸಾವಿರ ರೂಪಾಯಿಗಳು ಜಮಾ ಆಗುತ್ತಿದೆ. ಅಲ್ಲಿಯ ಹೆಡ್‌ಮಾಸ್ಟರ್, ಅಲ್ಲಿಯ ಎಸ್.ಡಿ.ಎಂ.ಸಿ. ಅಧ್ಯಕ್ಷರ ಹೆಸರಿನಲ್ಲಿ ಜಮಾ ಆಗುತ್ತಿದೆ.

ಛೇರ್‌ಮನ್ :- ಮಾನ್ಯ ಅರಗ ಜ್ಞಾನೇಂದ್ರ ರವರೇ ಮುಂಗಡ ಪತ್ರದ ಮೇಲಿನ ಚರ್ಚೆಯನ್ನು ನಾಳೆಯ ದಿವಸ ಮುಂದುವರಿಸೋಣ. ಈಗ ವಿಧೇಯಕವನ್ನು ಚರ್ಚೆಗೆ ತೆಗೆದುಕೊಳ್ಳೋಣ.

10. ಶಾಸನ ರಚನೆ

ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

2003ನೇ ಸಾಲಿನ ಕರ್ನಾಟಕ ಮೌಲ್ಯ ವರ್ಧಿತ ವಿಧೇಯಕದ ಮೇಲಿನ ಚರ್ಚೆ (ಮುಂದುವರಿದುದು)

ಛೇರ್‌ಮನ್ :- 2003ನೇ ಸಾಲಿನ ಕರ್ನಾಟಕ ಮೌಲ್ಯ ವರ್ಧಿತ ವಿಧೇಯಕದ ಮೇಲೆ ಮುಂದುವರಿದ ಚರ್ಚೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :- ಮಾನ್ಯ ಛೇರ್‌ಮನ್‌ರವರೆ, ಈ ವಿಧೇಯಕವನ್ನು ಮೊನ್ನೆಯೇ ಮಂಡಿಸಲಾಗಿದೆ. ಇವತ್ತು ವಿವರಣೆ ಕೊಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಛೇರ್‌ಮನ್‌ನವರೇ, ಮಾನ್ಯ ಮಂತ್ರಿಗಳು ಈಗ ಪ್ರೆಸೆಂಟ್ ಮಾಡುತ್ತಿದ್ದಾರೆ. ಇದನ್ನು ಮೊದಲೇ ಮಾಡಬೇಕಾಗಿತ್ತು. ಇದನ್ನು ಈಗಾಗಲೇ ಬಜೆಟ್‌ನಲ್ಲಿ ತಂದುಬಿಟ್ಟು, ನಾವು ಶಾಸನ ಮಾಡುವಂಥವರು ಬಜೆಟ್‌ನಲ್ಲಿ ಮೊದಲೇ ಬಂದ ಮೇಲೆ ಈಗ ಇದನ್ನು ಶಾಸನ ಮಾಡಿ ಎಂದು ತಂದರೆ ಇದು ಯಾವ ರೀತಿ ಸೂಕ್ತ?

ಶ್ರೀ ಡಿ.ಬಿ. ಚಂದ್ರೇಗೌಡ :- 10ನೇ ತಾರೀಖಿನಿಂದಲೂ ಈ ಮಸೂದೆ ಪ್ರತೀ ದಿನದ ಅಜೆಂಡಾದಲ್ಲಿ ಬರುತ್ತಾ ಇದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಬೇರೆ ಬಿಲ್ಸ್ ಎಲ್ಲಾ ಚರ್ಚೆ ಆಗಿ ಪಾಸ್ ಆಯಿತು. ಈ ಬಿಲ್ ಸಹ ಮೊದಲೇ ಈ ಸದನದಲ್ಲಿ ಶಾಸನ ಆಗಬೇಕಾಗಿತ್ತು. ನಂತರ ಬಜೆಟ್‌ನಲ್ಲಿ ಪ್ರಸೆಂಟೇಷನ್ ಮಾಡಬೇಕಾಗಿತ್ತು. ಇವಾಗ ಹೇಗಿದೆ ಎಂದರೆ ಬಜೆಟ್‌ನಲ್ಲಿ ಪ್ರಸೆಂಟೇಷನ್ ಮಾಡಿಬಿಟ್ಟು......

ಛೇರ್‌ಮನ್ :- ಮೊದಲೇ ಇದು ಸದನದಲ್ಲಿ ಮಂಡನೆ ಆಗಿತ್ತು. ಚರ್ಚೆಗೆ ತೆಗೆದುಕೊಂಡಾಗ ನಿಮ್ಮ ನಾಯಕರೇ-ಸ್ವಲ್ಪ ಸಮಯಾವಕಾಶ ಕೊಡಿ, ಮುಂದುವರಿಸಿ ಎಂದು ಹೇಳಿದ್ದಾರೆ. ನೀವು, ನಮ್ಮ ನಾಯಕರು ಹೇಳಿದ ಪ್ರಕಾರ ನಾವು ಮುಂದುವರಿಸಿದ್ದೇವೆ. ನಾವು ಇಲ್ಲಿ ಈ ಬಿಲ್ ಬಗ್ಗೆ ಚರ್ಚೆಗೆ ಕೇಳಿದಾಗ, ಅದನ್ನು ಮುಂದೆ ಡೀಟೈಲ್ ಆಗಿ ಚರ್ಚೆ ಮಾಡೋಣ, ಸೋಮವಾರ ತೆಗೆದುಕೊಳ್ಳೋಣ ಎಂದು ನಿಮ್ಮ ನಾಯಕರಾದ ಶ್ರೀ ಸಿಂಧ್ಯಾ ಅವರು ಹೇಳಿದರು. ಅದಕ್ಕೆ ನಾವು ಒಪ್ಪಿಕೊಂಡು ಇವತ್ತು ಚರ್ಚೆಗೆ ತೆಗೆದುಕೊಂಡಿದ್ದೇವೆ. ಈಗ ಚರ್ಚೆ ಮಾಡೋಣ. ಏಕೆಂದರೆ 30ನೇ ತಾರೀಖಿನೊಳಗೆ ರಾಜ್ಯಪಾಲರಿಂದ ಸಹಿ ಆಗಿ ಬರಬೇಕು. ನಂತರ ರಾಷ್ಟ್ರಪತಿಯವರಲ್ಲಿಗೆ ಈ ಬಿಲ್ ಹೋಗಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ :- ಈ ರೀತಿ ಮುಖ್ಯವಾದಂಥ ಮೌಲ್ಯ ವರ್ಧಿತ ತೆರಿಗೆ ವಿಧೇಯಕವನ್ನು ತರುತ್ತಿದ್ದೇವೆ ಇದನ್ನು ಮೊದಲೇ ತಂದು ಚರ್ಚೆ ಮಾಡಿದ್ದರೆ ಸರಿಯಾಗುತ್ತಿತ್ತು. ಅದು ಬಿಟ್ಟು ಈಗ ನೀವು ಆತುರ ಆತುರವಾಗಿ ತರುವುದು ನಂತರ ನೀವು ಏನೋ ಮಾಡಿ ಎಂದು ಹೇಳಿವುದು...

ಛೇರ್‌ಮನ್ :- ಈಗ ಚರ್ಚೆಯನ್ನು ಪ್ರಾರಂಭಿಸೋಣ, ನಾವು ಏನೋ ಮಾಡಲಿಕ್ಕೆ ಹೇಳಲಿಲ್ಲ. ಚರ್ಚೆಯನ್ನು ಪ್ರಾರಂಭಿಸಿ ಎಂದು ಹೇಳಿದ್ದೇವೆ ಅಷ್ಟೆ. ಚರ್ಚೆಯನ್ನು ನೀವು ಪ್ರಾರಂಭಿಸಿ. ಎಷ್ಟು ಹೊತ್ತಾದರೂ ಕುಳಿತು ಚರ್ಚೆ ಮಾಡೋಣ.

ಶ್ರೀ ಬಿ.ಎನ್. ಬಚ್ಚೇಗೌಡ :- ಚರ್ಚೆಗೆ ಏನಿದೆ ಸ್ವಾಮಿ? ಇದೆಲ್ಲಾ ಆಗಿಯೇ ಹೋಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಈ ಮಸೂದೆಯು ಮೌಲ್ಯ ವೃದ್ಧಿಯಾಗಲೇ ಇಲ್ಲ. ಇಡೀ ತಿಂಗಳೆಲ್ಲಾ ಕಾದಿದೆ ಅದು.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ :- ಇಲ್ಲಿ ತಕರಾರು ಮಾಡುತ್ತಾರೆ ಎನ್ನುವ ಪ್ರಶ್ನೆ ಅಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :- ತಾವು ಹಿರಿಯ ಸದಸ್ಯರು, 1967ನೇ ಇಸವಿಯಿಂದ ಇರುವವರು. ತಮಗೆ ಒಂದು ಮಾತು ಹೇಳುತ್ತೇನೆ ಕೇಳಿ. ಪ್ರತಿ ತಿಂಗಳ, ಪ್ರತಿ ದಿನ ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಒಂದಲ್ಲ ಒಂದು ಕಾರಣಕ್ಕಾಗಿ ಅದು ಮುಂದೆ ಹೋಗುತ್ತದೆ. ಅದಕ್ಕೆ ಸರ್ಕಾರ ಹೊಣೆಯಲ್ಲ. ಆದ್ದರಿಂದಲೇ ಈಗಲೂ ತಡವಾಗಿಲ್ಲ. ಪ್ರಾರಂಭಿಸೋಣ ಎಂದು ಛೇರ್ ಮನ್ ಅವರು ಆದೇಶ ಕೊಟ್ಟಿದ್ದಾರೆ. ಈಗ ಚರ್ಚೆಯನ್ನು ಪ್ರಾರಂಭ ಮಾಡೋಣ. ಮಾನ್ಯ ಛೇರ್‌ಮನ್‌ರವರೇ, ಇದೊಂದು ಸರಳ, ಪಾರದರ್ಶಕ ಮತ್ತು ಸ್ಪಷ್ಟವಾದಂಥ ಶಾಸನವಾಗಿದೆ. ಈ ಶಾಸನದ ಬಗ್ಗೆ ಮುಂಗಡಪತ್ರದಲ್ಲಿ ಮಾನ್ಯ

ಅರ್ಥಸಚಿವರು, ಮುಖ್ಯಮಂತ್ರಿಗಳು, ಸಭಾನಾಯಕರು ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಇದರಲ್ಲಿ ನನ್ನ ಹೊರೆ ಕಡಿಮೆ ಎಂದು ನಾನು ಭಾವನೆ ಮಾಡುತ್ತೇನೆ. 1999ನೇ ಇಸವಿಯ ನವೆಂಬರ್ ತಿಂಗಳಿನಲ್ಲಿ ರಾಜ್ಯಗಳ ಅರ್ಥ ಮಂತ್ರಿಗಳ ಒಂದು ಸಮಾವೇಶ ನಡೆಯಿತು. ಈ ಸಮಾವೇಶಕ್ಕೆ ಕೇಂದ್ರದ ಮಾನ್ಯ ಅರ್ಥಮಂತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಆ ಒಂದು ಸಭೆಯಲ್ಲಿ ಈ ಕಮಾಡಿಟಿಗಳ ತೆರಿಗೆಗಳನ್ನು, ಟ್ಯಾಕ್ಸೇಷನ್ ರಿಫಾರ್ಮ್ಸ್ ಮಾಡಬೇಕೆಂದು ಒಂದು ನಿರ್ಣಯವನ್ನು ಮಂಡನೆ ಮಾಡಿ ಇಡೀ ದೇಶದ ಎಲ್ಲಾ ಅರ್ಥ ಮಂತ್ರಿಗಳು ಮತ್ತು ಕೇಂದ್ರದ ಅರ್ಥಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆ ತೀರ್ಮಾನಿಸಿತು. ಕಾರಣ ಏನೆಂದರೆ, ಈ ಡಬ್ಲ್ಯುಟಿಒ ಒಪ್ಪಂದ ಆದ ಮೇಲೆ ಇಂಟರ್‌ನ್ಯಾಷನಲ್ಸ್ ಟ್ರೇಡ್‌ನಲ್ಲಿ ಕಾಂಪಿಟಿಷನ್ ಜಾಸ್ತಿ ಆಗುತ್ತದೆ. ಆದ್ದರಿಂದ ಒಂದು ನಿಖರವಾದ ನೆಲೆಯ ಮೇಲೆ ನಿಂತು ನಾವು ತೆರಿಗೆಗಳನ್ನು ಹಾಕತಕ್ಕಂಥ ಒಂದು ಕ್ರಮವನ್ನು ಅನುಸರಿಸಬೇಕೆನ್ನತಕ್ಕಂಥ ಒಂದು ಮೂಲ ನೀತಿಯ ಬಗ್ಗೆ ಇದನ್ನು ಮಾಡುತ್ತಿದ್ದೇವೆ. ಒಂದೊಂದು ರಾಜ್ಯಕ್ಕೂ ಒಂದೊಂದು ತೆರಿಗೆ ಇದೆ. ಅದರಲ್ಲಿ ವಿಶೇಷವಾಗಿ ಈ ಮಾರಾಟ ತೆರಿಗೆಯಲ್ಲಿ ಒಂದೊಂದು ರಾಜ್ಯದಲ್ಲೂ ಒಂದೊಂದು ರೀತಿಯಾದಂಥ ತೆರಿಗೆಯ ಕಾಂಪಿಟೇಷನ್ ಇದ್ದ ಕಾರಣ ಒಂದು ದರದಲ್ಲಿ ಈ ತೆರಿಗೆಯನ್ನು ಮಾಡಬೇಕೆನ್ನತಕ್ಕಂಥ ಉದ್ದೇಶದಿಂದ ಈ ಒಂದು ವಿಧೇಯಕವನ್ನು ತರುತ್ತಿದ್ದು, ಇದು ಒಂದು ರಾಷ್ಟ್ರೀಯ ವಿಧೇಯಕ, ಈ ವಿಧೇಯಕಕ್ಕೆ ಸರ್ವಸಮ್ಮತವಾದ ಒಪ್ಪಿಗೆ ಬೇಕಾಗುತ್ತದೆ. ಇಲ್ಲಿ ಬಹಳ ಮುಖ್ಯವಾಗಿ ನಾವು ಗಮನಿಸಬೇಕಾದದ್ದು ಏನೆಂದರೆ, ರಾಜ್ಯದ ತೆರಿಗೆಯಲ್ಲಿ ಶೇಕಡ 65 ರಿಂದ ಸುಮಾರು 70 ರಷ್ಟು ತೆರಿಗೆ ಈ ಮಾರಾಟ ತೆರಿಗೆಯಿಂದಲೇ ಬರುತ್ತದೆ. ನನಗೆ ಗೊತ್ತಿರುವ ಹಾಗೆ 10-15 ವರ್ಷಗಳ ಕೆಳಗೆ ಮಾರಾಟ ತೆರಿಗೆಯನ್ನು ತೆರಿಗೆಯ ಮೇಲೆ ತೆರಿಗೆ ಅಂದರೆ ಸುಮಾರು 34 ಬಗೆಯ ತೆರಿಗೆಗಳನ್ನು ಒಂದು ಕಡೆ ಹಾಕುತ್ತಿದ್ದರು. ಇದಕ್ಕೆ ಎಲ್ಲಾದರೂ ಒಂದು ಕಡೆ ರಾಷನಲೈಜ್ ಮಾಡಬೇಕೆಂದು ಆಲೋಚನೆ ನಡೆಯಿತು. ಈ ಆಲೋಚನೆಗೆ ಒಂದು ಸ್ವರೂಪ ಬಂದದ್ದು ಒಂದು ವರ್ಷ ಹಿಂದೆ. ಕೇಂದ್ರದ ಹಣಕಾಸಿನ ಸಚಿವರು ಈ ವರ್ಷದ ಆಯವ್ಯಯವನ್ನು ಮಂಡನೆ ಮಾಡುತ್ತಾ 1.04.2003ನೇ ಇಸವಿಯಿಂದ ರಾಷ್ಟ್ರಮಟ್ಟದಲ್ಲಿ ಏಕಕಾಲಕ್ಕೆ ಎಲ್ಲಾ ರಾಜ್ಯಗಳಲ್ಲಿ ಈ ಮೌಲ್ಯ ವರ್ಧಿತ ತೆರಿಗೆ ಜಾರಿಗೆ ಬರುತ್ತದೆ ಎಂದು ಸಂದೇಶವನ್ನು ಕೊಟ್ಟಿದ್ದಾರೆ. ಜಗತ್ತಿನ ಸರಿಸುಮಾರು 130 ರಾಷ್ಟ್ರಗಳು ಒಪ್ಪಿಕೊಂಡಿರತಕ್ಕಂಥ ತೆರಿಗೆ ಇದಾಗಿರುತ್ತದೆ. 1952ನೇ ಇಸವಿ ಸುಮಾರಿಗೆ ಫ್ರಾನ್ಸ್ ದೇಶದಲ್ಲಿ ಮೊದಲು ಈ ತೆರಿಗೆ ಪದ್ಧತಿಯನ್ನು ಪ್ರಾರಂಭ ಮಾಡಿದರು ಎಂದು ನಾವು ಇದನ್ನು ಯೋಚನೆ ಮಾಡಿದ್ದೇವೆ. ಆದ್ದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ ಒಪ್ಪಿಕೊಂಡಿರತಕ್ಕಂಥ ಒಂದು ಸುಧಾರಿತವಾದಂಥ ತೆರಿಗೆ ಇದಾಗಿದೆ. ನಾನು ಮೊದಲೇ ಹೇಳಿದ ಹಾಗೆ ಈ ತೆರಿಗೆಯನ್ನು 10-15 ವರ್ಷಗಳಿಂದ 34 ವಿಭಾಗಗಳಿಂದ ತೆರಿಗೆ ಹಾಕುತ್ತಿದ್ದರು, ಆ ತೆರಿಗೆಯನ್ನು ಎರಡು ಹಂತದಲ್ಲಿ ಹಾಕಬೇಕು ಎನ್ನತಕ್ಕಂತ ಒಂದು ಮೂಲ ಉದ್ದೇಶದಿಂದ ಈ ಬಿಲ್‌ನ್ನು ತರಲಾಗಿದೆ. ಆ ಹಂತಗಳಲ್ಲಿ ಬಹಳ ಮುಖ್ಯವಾದದ್ದು ಯಾವುದೆಂದರೆ, ಸಾರ್ವಜನಿಕ ಬಳಕೆಯ ವಸ್ತುಗಳು ಉದಾಹರಣೆಗೆ: ಅಡಿಕೆ, ಬೀಡಿ ಎಲೆ, ಅಲ್ಯೂಮಿನಿಯಂ ಅಂಥ ಪದಾರ್ಥಗಳು, ಇವುಗಳಿಗೆ ಕನಿಷ್ಟ ಶೇಕಡ 4 ರಷ್ಟು ತೆರಿಗೆ, ಉಳಿದ ಎಲ್ಲಾ ತೆರಿಗೆಗಳಲ್ಲೂ ಶೇಕಡ ಹನ್ನೆರಡೂವರೆಗಿಂತ ಹೆಚ್ಚಿಗೆ ಹಾಕಲಾರದು, ಆದ್ದರಿಂದ ಅಷ್ಟಕ್ಕೆ ಕೇಂದ್ರ ಸರ್ಕಾರದವರು ಪೆಗ್ ಮಾಡಿದ್ದಾರೆ ಇದು ಎಲ್ಲಾ ರಾಜ್ಯಗಳಿಗೂ ಅನ್ವಯವಾಗುತ್ತದೆ. ಹಾಗೆಯೇ 300 ಬಗೆಯ ಸರಕುಗಳಿಗೆ ಈ ಮೌಲ್ಯ

ವರ್ಧಿತ ತೆರಿಗೆಯ ಜಾಲ ಹರಡಿದೆ. ಈ ತೆರಿಗೆ ಜಾರಿಯಿಂದ ಶೇಕಡ 18 ರಷ್ಟು, 15 ರಷ್ಟು ಇದ್ದ ತೆರಿಗೆ ಶೇಕಡ ಹನ್ನೆರಡೂವರೆಯಷ್ಟಕ್ಕೆ ಇಳಿಯುತ್ತದೆ. ಈ ಇಳಿತದಿಂದಾಗಿ ಸುಮಾರು 750 ಕೋಟಿ ರೂಪಾಯಿಗಳಷ್ಟು ನಷ್ಟ ಆಗಬಹುದು ಎಂದು ನಾವು ಅಂದಾಜು ಮಾಡಿದ್ದೇವೆ. ಅದನ್ನು ಆಯವ್ಯಯದಲ್ಲಿ ಅರ್ಥ ಮಂತ್ರಿಗಳು ಪ್ರಸ್ತಾಪ ಮಾಡಿದ್ದಾರೆ. ಹೀಗೆ ನಷ್ಟವಾಗತಕ್ಕಂಥ ತೆರಿಗೆಯನ್ನು ಮೊದಲನೇ ವರ್ಷ ಕೇಂದ್ರ ಸರ್ಕಾರ ಪೂರ್ಣ ಪ್ರಮಾಣದಲ್ಲಿ, 2ನೇ ವರ್ಷ ಸುಮಾರು ಶೇಕಡ 75 ರಷ್ಟು, 3ನೇ ವರ್ಷ ಶೇಕಡ 50 ರಷ್ಟು ತುಂಬಿಕೊಡುತ್ತೇವೆ ಎನ್ನುವಂಥ ಆಶ್ವಾಸನೆಯನ್ನು ಈ ಒಂದು ಸಭೆಯಲ್ಲಿ ತೀರ್ಮಾನ ಆಗಿರುವುದರಿಂದ ನಾವು ಈ ವ್ಯಾಟ್ ತೆರಿಗೆಯನ್ನು ಒಪ್ಪಿಕೊಂಡಿದ್ದೇವೆ ಎನ್ನುವಂಥ ಮಾತನ್ನು ಈ ಸದನದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಈ ತೆರಿಗೆನಲ್ಲಿ ಬಹಳ ವಿಶೇಷವಾಗಿ ನಾವು ಗಮನಿಸಬೇಕಾದುದು ಫಂಡ್ ಅಂಡ್ ರಿಫಂಡ್. ಮೊದಲು ಕೊಟ್ಟಿರುತ್ತೀರಿ ಅದು ವೃದ್ಧಿಯಾಗಿ ಹೆಚ್ಚಾದರೆ ಅದನ್ನು ರಿಫಂಡ್ ಮಾಡುವುದು. ಮೂಲ ತೆರಿಗೆ ಕೊಟ್ಟಿದ್ದರೆ ಅದನ್ನು ವಜಾ ಮಾಡಿಕೊಂಡು ಮುಂದೆ ಬರತಕ್ಕಂಥ ತೆರಿಗೆಯನ್ನು ರ್‍ಯಾಷನಲೈಜ್ ಮಾಡತಕ್ಕಂಥ ಒಂದು ಆಲೋಚನೆ ಈ ಶಾಸನ ಜಾರಿಗೆ ಬಂದರೆ ಬರುತ್ತದೆ. ಬಹಳ ಮುಖ್ಯವಾಗಿ ಮೂಲಭೂತವಾದ ವ್ಯತ್ಯಾಸ ಏನೆಂದರೆ, ತೆರಿಗೆಯ ಮೇಲೆ ತೆರಿಗೆ ಕಟ್ಟತಕ್ಕಂಥ ಪದ್ಧತಿ ರದ್ದಾಗುತ್ತದೆ. ಮುಂದೆ ಆ ತೆರಿಗೆಗೆ ರಿಬೇಟ್ ಸಿಗುತ್ತದೆ. ಒಂದು ವೇಳೆ ಆ ರಿಬೇಟ್ ಸಿಕ್ಕಿದ ಮೇಲೆ ಎಲ್ಲಿ ತೆರಿಗೆ ಕೊಟ್ಟಿರುತ್ತದೆಯೋ ಅದನ್ನು ರಾಜ್ಯ ವಾಪಸ್ ಕೊಡತಕ್ಕಂಥ ವ್ಯವಸ್ಥೆ ಈ ಮಸೂದೆಯಲ್ಲಿ ನಮುದಾಗಿದೆ. ಉದಾಹರಣೆಗೆ ಹೇಳುವುದಾದರೆ, ಒಂದು ವಸ್ತುವಿನ ಬೆಲೆ 5 ಸಾವಿರ ರೂಪಾಯಿ ಇಟ್ಟುಕೊಂಡರೆ ಶೇಕಡ 4ರಷ್ಟು ತೆರಿಗೆ ಹಾಕಿದರೆ ಒಟ್ಟಾರೆಯಾಗಿ 5200 ರೂಪಾಯಿ ಆಗುತ್ತದೆ. ಅವನು ಲಾಭಕ್ಕಾಗಿ 200 ರೂಪಾಯಿ ಇಟ್ಟುಕೊಂಡರೆ ಆ ವಸ್ತುವಿನ ಬೆಲೆ 5400 ರೂಪಾಯಿ ಆಯಿತು, 5400 ರೂಪಾಯಿಗಳನ್ನು ನಾಲ್ಕರಿಂದ ಭಾಗಿಸಿದರೆ 216 ರೂಪಾಯಿ ಆಯಿತು, 216 ರೂಪಾಯಿ ಸೇರಿಸಿದರೆ ಆ ವಸ್ತುವಿನ ಒಟ್ಟು ಮೌಲ್ಯ 5616 ರೂಪಾಯಿ ಆಯಿತು. I think, I have made myself very clear. ಈ ಒಟ್ಟು ಮೌಲ್ಯವಾದ 5616ಕ್ಕೆ ಅವನು ಮೊದಲೇ ಕೊಟ್ಟಿರತಕ್ಕಂಥ ತೆರಿಗೆ 200 ರೂಪಾಯಿಗಳನ್ನು ಮುರಿದುಕೊಂಡು ಆ ವಸ್ತುವಿನ ಬೆಲೆ 5416 ರೂಪಾಯಿ ಆಗುತ್ತದೆ. ಇದು ಒಂದು ಸಾಧಾರಣವಾದ ಲೆಕ್ಕ. ಆದುದರಿಂದ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ತುಂಬಾ ಏರೀಳಿತ ಸರಕುಗಳ ಮೇಲೆ ಏನು ಕಾಣುತ್ತಿದೆ ಆ ಹೊರೆ ಕಡಿಮೆಯಾಗಬಹುದು ಎನ್ನುವುದು ಈ ಮಸೂದೆಯಲ್ಲಿ ಬಹಳ ಮುಖ್ಯವಾಗಿ ಗಮನಿಸಬೇಕಾದ ಅಂಶ. ಇದರಲ್ಲಿ ಮೂರು ಭಾಗ ಮಾಡಿದೇವೆ. ತೆರಿಗೆ ದರ ವಿಧಿಸುವುದಕ್ಕೆ ಮೊದಲನೆಯದು ಅಗತ್ಯ ವಸ್ತುಗಳು, ಆಯವ್ಯಯದಲ್ಲಿ ಮಂಡನೆ ಮಾಡಿರುವಂತೆ ಅಗತ್ಯ ವಸ್ತುಗಳ ಮೇಲೆ ತೆರಿಗೆಯ ರಿಯಾಯಿತಿ ಇದೆ. ಆ ಪಟ್ಟಿ 2003-04ರ ಆಯವ್ಯಯದಲ್ಲಿ ಕೊಟ್ಟಿದ್ದೇವೆ. ತಾಜಾ ತರಕಾರಿ, ಒರಡು ಧಾನ್ಯ, ಕೈ ಚಾಲಿತ ಉಪಕರಣಗಳು ಇಂಥ ಅಗತ್ಯ ವಸ್ತುಗಳಿಗೆ ತೆರಿಗೆ ವಿನಾಯಿತಿ ಹೊಂದಿದೆ ಎನ್ನುವುದನ್ನು ಪ್ರಸ್ತಾಪ ಮಾಡಿದ್ದೇವೆ. ಪ್ರಸ್ತುತ ಮಾರಾಟ ತೆರಿಗೆಯ ವ್ಯಾಪ್ತಿಯಲ್ಲಿಯೇ ಕೆಲವು ವಸ್ತುಗಳು ಮುಂದುವರಿಯುತ್ತವೆ, ಅವುಗಳು ಯಾವುದೆಂದರೆ, ರಾಷ್ಟ್ರೀಯವಾಗಿ ಒಪ್ಪಿಕೊಂಡಿರತಕ್ಕಂಥ ವ್ಯವಸ್ಥೆ, ಅದರಲ್ಲಿ ಪೆಟ್ರೋಲ್, ಡೀಸಲ್, ವೈಮಾನಿಕ ಇಂಧನ, ಕಬ್ಬು, ಲಾಟರಿ ಟಿಕೆಟ್‌ಗಳು ಇವು ಬರುತ್ತವೆ. ಕಬ್ಬು ಏಕೆ ಇಲ್ಲಿ ಬಂದಿದೆ ಎಂದರೆ, ರೈತರಿಗೆಲ್ಲರಿಗೂ ಈ ಪ್ರಶ್ನೆ ಕಾಡುತ್ತಿದ್ದರೆ, ಇದನ್ನು ಏಕೆ ವ್ಯಾಟ್‌ನಿಂದ ಹೊರಗೆ ಉಳಿಸಿದ್ದಾರೆ.

ಎಂದು ಇದಕ್ಕೆ ಬಹಳ ಮುಖ್ಯ ಕಾರಣ, by and between the States - ಎರಡು ರಾಜ್ಯಗಳ ಮಧ್ಯೆ ಮತ್ತು ಕೇಂದ್ರ ಸರ್ಕಾರಕ್ಕೂ ಒಂದು ಒಪ್ಪಂದ ಇರುತ್ತದೆ. Rental agreement between the States - ಇರುತ್ತದೆ ಮತ್ತು ಕೇಂದ್ರ ಸರ್ಕಾರದ ಜೊತೆಗೆ ಒಪ್ಪಂದ ಇರುವುದರಿಂದ ಅದನ್ನು ಈ ವ್ಯಾಪ್ತಿಯಿಂದ ಹೊರಗೆ ಇಟ್ಟು ಪ್ರಸ್ತುತ ಮಾರಾಟ ತೆರಿಗೆ ಪಟ್ಟಿಯಲ್ಲಿಯೇ ಮುಂದುವರೆಯುತ್ತದೆ. ಮಾನ್ಯ ಸಿಂಧ್ಯಾರವರು ಅಬಕಾರಿಯನ್ನು ಏಕೆ ಹೊರಗಡೆ ಇಟ್ಟದ್ದೀರಿ ಎಂದು ಕೇಳಿದರು. ಇವರು ಅಬಕಾರಿ ಕಾಯಿದೆಯಲ್ಲಿಯೇ ಮುಂದುವರಿಯುತ್ತವೆ. ಈ ವ್ಯಾಟ್‌ಗೆ ತರುವುದಕ್ಕೆ ಈಗಾಗಲೇ ಶೇಕಡ 1 ರಿಂದ 20 ತೆರಿಗೆ ವಿಧಿಸತಕ್ಕಂಥ ವ್ಯವಸ್ಥೆ ಏನು ಇದೆ ಹಾಗೂ ಈ ಅಬಕಾರಿ, ಮದ್ಯಸಾರ, ಬೀರು, ಲಿಕ್ಕರ್, ಇಂಥವುಗಳ ಅಬಕಾರಿ ಕಾಯಿದೆಯಲ್ಲಿಯೇ ಮುಂದುವರಿಯುತ್ತವೆ. ಕೇಂದ್ರ ಸರ್ಕಾರ ಯಾವುದನ್ನು ವಿನಾಯಿತಿ ಕೊಡುತ್ತದೆ ಅವುಗಳನ್ನು ಈ ವ್ಯಾಟ್‌ನಿಂದ ಹೊರಗೆ ಇಡಲಾಗುವುದು, ಕೇಂದ್ರ ಸರ್ಕಾರ ವಿನಾಯಿತಿ ಕೊಡದೇ ಇರತಕ್ಕಂಥ ವಸ್ತುಗಳು ವ್ಯಾಟ್‌ನ ಒಳಗಡೆ ಬರುತ್ತವೆ. ಶೇಕಡ 4ರ ತೆರಿಗೆಯಲ್ಲಿ ಮುಂದುವರಿಯತಕ್ಕಂಥವು ಬೆಂಕಿ ಪೊಟ್ಟಣ, ಖಾದ್ಯತೈಲ, ಬ್ರೆಡ್ಡು, ಬನ್, ಇಂಥ ಕೆಲವು ಐಟಂಗಳು. ಮಿಕ್ಕ ಎಲ್ಲಾ ವಸ್ತುಗಳಿಗೆ ಸ್ಟಾ್ಯಂಡರ್ಡ್ ರೇಟ್ ಎಂದು ಏನು ಹೇಳುತ್ತೇವೆ ಆ 12.5 ಪರ್ಸೆಂಟ್ ಅನ್ನೇ ನಿಗದಿ ಮಾಡಿದ್ದೇವೆ. ಇನ್ನು ಉಳಿದಿರತಕ್ಕಂಥ ಕೆಲವು ವಸ್ತುಗಳನ್ನು ಶೇಕಡ 1 ರಿಂದ 20ರ ತೆರಿಗೆಗೆ ಡೀಮೆರಿಟ್ಸ್ ಸರಕುಗಳು ಎಂದು ಹೇಳಿ ಅದನ್ನು ಅಲ್ಲಿ ತೋರಿಸಿದ್ದಾರೆ. ರಾಜ್ಯ ಸರ್ಕಾರ, ಬಟ್ಟೆ, ಸಕ್ಕರೆ ತಂಬಾಕು ಉತ್ಪನ್ನಗಳು, ಇಂಥವುಗಳಿಗೆ ಇನ್ನೂ ಈ ವ್ಯಾಟ್ ತೆರಿಗೆಯ ವ್ಯಾಪ್ತಿಗೆ ಒಳಪಡಿಸಿಲ್ಲ. ಕಾರಣ ಏನೆಂದರೆ, ಮುಂದೆ ಕೇಂದ್ರ ಸರ್ಕಾರ ಹಾಗೂ ಬೇರೆ ಬೇರೆ ರಾಜ್ಯ ಸರ್ಕಾರಗಳು ವಿಧಿಸತಕ್ಕಂಥ ತೆರಿಗೆಯನ್ನು ನೋಡಿಕೊಂಡು ಹಾಗೂ ಇತರ ರಾಜ್ಯಗಳು ಅನುಸರಿಸುವ ರೀತಿ ಮತ್ತು ಅದರ ಜೊತೆಯಲ್ಲಿ ಉದ್ಯಮದ ಗಮನದಲ್ಲಿಟ್ಟುಕೊಂಡು ಎಲ್ಲಾ ರಾಜ್ಯಗಳು ನಿಗಧಿಪಡಿಸಿದ ಮೇಲೆ ನಾವು ಉಳಿದಿರತಕ್ಕಂಥವುಗಳಿಗೆ ದರ ನಿಗದಿ ಮಾಡಬೇಕೆಂದು ನಮ್ಮ ಆಯವ್ಯಯದಲ್ಲಿ ಪ್ರಸ್ತಾಪಿಸಲಾಗಿದೆ. ರಾಜ್ಯ ಸರ್ಕಾರ, ಬಟ್ಟೆ, ಸಕ್ಕರೆ ತಂಬಾಕು ಉತ್ಪನ್ನಗಳ ಮೌಲ್ಯವರ್ಧಿತ ತೆರಿಗೆಯನ್ನು ವಿಧಿಸಲು ಅನುಮತಿ ಹೊಂದಿದ ನಂತರ ಅಂದರೆ, ಕೇಂದ್ರ ಸರ್ಕಾರದ ಅನುಮತಿ ಹೊಂದಿದ ನಂತರ, ಇತರ ರಾಜ್ಯಗಳು ಅನುಸರಿಸುವ ತೆರಿಗೆ ದರಗಳನ್ನು ಹಾಗೂ ನಮ್ಮ ವಾಣಿಜ್ಯ ಮತ್ತು ಉದ್ಯಮಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳ ಮೇಲೆ ಸೂಕ್ತವಾದ ದರದಲ್ಲಿ ಮೌಲ್ಯವರ್ಧಿತ ತೆರಿಗೆಯನ್ನು ವಿಧಿಸಲು ನಾನು ಪ್ರಸ್ತಾಪಿಸುತ್ತಿದ್ದೇನೆಂದು ಹೇಳಿದ್ದಾರೆ. ಆದ್ದರಿಂದ ಅದು ಶಾಸನವಾಗಬೇಕಾಗಿದೆ. ಈ ಮೌಲ್ಯವರ್ಧಿತ ತೆರಿಗೆ ಜಾರಿಯಾದರೆ ಸರಕುಗಳ ಬೆಲೆ ಏಕೆ ಏರಿಕೆಯಾಗುವುದಿಲ್ಲ ಎನ್ನುವ ಸಂಶಯ ಸರಳವಾಗಿದೆ. ಮೇಲ್ನೋಟಕ್ಕೆ ನಮಗೆ 250 ಕೋಟಿ ರೂಪಾಯಿ ಕಡಿಮೆಯಾಗುತ್ತದೆ. ಬರತಕ್ಕಂಥ ದರಗಳು ಮೇಲಕ್ಕೆ ಹೋಗುವುದಿಲ್ಲ ಎನ್ನುವ ಒಂದು ಸಂದೇಶ. ಇದೇ ಆಧಾರವೆಂದಲ್ಲ, ಅದೇ ಒಂದು ಸಂದೇಶ. ಅದರ ಜೊತೆಗೆ ಕೆಲವು ಸರಕುಗಳು ಪ್ರಸ್ತುತ ತೆರಿಗೆಯಿಂದ ಹೆಚ್ಚಿನ ತೆರಿಗೆಗೆ ಒಳಗಾದರೂ ಬಹಳಷ್ಟು ಸರಕುಗಳ ಮೇಲಿನ ತೆರಿಗೆ ಕಡಿಮೆಯಾಗುವುದರಿಂದ ಒಟ್ಟು ತೆರಿಗೆ ಪ್ರಸ್ತುತ ತೆರಿಗೆಗಿಂತ ಕಡಿಮೆಯಾಗುತ್ತವೆ. ಇದಕ್ಕೆ ಕಾರಣ ಏನೆಂದರೆ, ನಾವು ಜಾರಿ ಮಾಡಲು ಉದ್ದೇಶಿಸಿರುವ ಶೇಕಡ 12.5ರ ಬದಲಾಗಿ ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಶೇಕಡ 15 ರಾಜಸ್ವ ಸಮಾನದರ ಇರುವುದರಿಂದ ಅದು ಅಷ್ಟರಮಟ್ಟಿಗೆ ಕಡಿಮೆಯಾಗುತ್ತದೆ. ಹೀಗಾಗಿ ಬೆಲೆ ಜಾಸ್ತಿಯಾಗುವುದಿಲ್ಲವೆಂದು ಸ್ಥೂಲವಾಗಿ ಕೆಲವು ವಿಚಾರಗಳನನು ಇಲ್ಲಿ ಹೇಳಲಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ :- ಬೆಲ್ಲಕ್ಕೆ ಎಷ್ಟು ಆಗುತ್ತದೆ? ಬೆಲ್ಲ ಆದರಡಿಯಲ್ಲಿ ಬರುತ್ತದೆಯೇ? ಅದು ಕೊಲ್ಹಾಪುರಕ್ಕೆ ಹೋಗುತ್ತದೆ ಎಂದು ಹೇಳಿದ್ದೀರಿ ಅದು 4 ಪರ್ಸೆಂಟ್‌ಗೆ ಹೋಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಈಗ ಅದನ್ನು ತಕ್ಷಣ ಲೆಕ್ಕ ಹಾಕುವುದಕ್ಕೆ ಆಗುವುದಿಲ್ಲ. ಆ ಪಟ್ಟಿಯನ್ನು ನೋಡಬೇಕಾಗುತ್ತದೆ. ಡಿಟೇಲ್ ಆಗಿ ಈ ಬಜೆಟ್‌ನಲ್ಲಿ ಚರ್ಚೆಯಾಗುತ್ತಿದೆ. ಅದನ್ನು ಮಾಡಬಹುದು..... ಅನುಬಂಧ-3ರಲ್ಲಿ ಮೌಲ್ಯವರ್ಧಿತ ತೆರಿಗೆಯಡಿಯಲ್ಲಿ ಶೇಕಡಾ ನಾಲ್ಕರ ದರದಲ್ಲಿ ತೆರಿಗೆಗೆ ಗುರಿಯಾಗತಕ್ಕ ಸರಕುಗಳ ಒಂದು ಪಟ್ಟಿಯನ್ನು ಕೊಡಲಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಅವರ ಪ್ರಶ್ನೆ ಇಷ್ಟೇ ಸಕ್ಕರೆ ಇದರ ವ್ಯಾಪ್ತಿಗೆ ಬರುತ್ತದೆಯೇ? ಬೆಲ್ಲ ಇದರ ವ್ಯಾಪ್ತಿಗೆ ಬರುತ್ತದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಸಕ್ಕರೆ ಬರುವುದಿಲ್ಲ. ನಾನು ಲಿಸ್ಟ್ ನೋಡಿ ಹೇಳುತ್ತೇನೆ, ಏಕೆಂದರೆ ನಾನು ಅಷ್ಟೊಂದು ಡಿಟೇಲ್ಸ್‌ಗೆ ಹೋಗಿಲ್ಲ. ಜೊತೆಗೆ ಈ ಮಸೂದೆ ಮೇಲ್ಮನೆಯಲ್ಲಿ ಮಂಜೂರಾಗಿ ರಾಜ್ಯಪಾಲರ ಒಪ್ಪಿಗೆಗೂ ಹೋಗಬೇಕಾಗಿದೆ. ಕೇಂದ್ರದ ಹಣಕಾಸು ಮಂತ್ರಿಗಳು ಈ ವ್ಯಾಟ್ 1.4.2003 ಅಂದರೆ ಇನ್ನು ಹತ್ತು ದಿವಸಗಳಲ್ಲಿ ಜಾರಿಗೆ ಬರುತ್ತದೆ. ಎನ್ನುವ ಸಂದೇಶವನ್ನು ಅವರು ತಮ್ಮ ಬಜೆಟ್ ಭಾಷಣದಲ್ಲಿ ತಿಳಿಸಿದ್ದಾರೆ. ಮೌಲ್ಯವರ್ಧಿತಾ ತೆರಿಗೆ ವ್ಯವಸ್ಥೆ ಅಷ್ಟೇ ಮೌಲ್ಯಿಕವಾದಂಥ ವ್ಯಾಪಕವಾದಂಥ ಚರ್ಚೆಯಾಗಲಿ, ಅದರಲ್ಲಿ ಸುಧಾರಣೆಗಳ ಅಗತ್ಯ ಬಿದ್ದರೆ ಖಂಡಿತ ಸರ್ಕಾರ ಗಮನಿಸುತ್ತದೆ. ನಾನು ಈಗಾಗಲೇ ಹೇಳಿದ ಹಾಗೆ ಮೂಲತಃ ಇದೊಂದು ರಾಷ್ಟ್ರೀಯವಾಗಿ ಒಪ್ಪಿಕೊಂಡಿರತಕ್ಕಂಥ ಅಂತರಾಷ್ಟ್ರೀಯ ವ್ಯವಸ್ಥೆ ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮೂಲಕ ಸದನದ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಛೇರ್ಮನ್ :- ಮಾನ್ಯ ಸಿಂಧ್ಯಾರವರು ತಾವು ಮಾತನಾಡಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾವು ಮೊದಲು ಮಾತನಾಡಬೇಕಾಗಿತ್ತು ನಮಗೆ ಅವಕಾಶ ಮಾಡಿಕೊಡಿ.

ಛೇರ್ಮನ್ :- ತಮ್ಮ ನಾಯಕರು ಇಲ್ಲವಲ್ಲಾ ಹೀಗಾಗಿ ನಾಯಕರಿಗೆ ಅವಕಾಶ ಕೊಡಬೇಕಲ್ಲಾ? ಹೀಗಾಗಿ ನಾನು ಅವರನ್ನು ಕರೆದೆ. ಸಿಂಧ್ಯಾರವರೇ, ತಾವು ಮಾತನಾಡಿ.

Sri P.G.R. Sindhia :- I don't want to compete with him. Let him speak.

5.20 ಪಿ.ಎಂ.

+ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :- ಮಾನ್ಯ ಛೇರ್ಮನ್‌ರವರೆ, ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ವಿಧೇಯಕ, 2003 ಅನ್ನು ಮಾನ್ಯ ಸಂಸದೀಯ ಸಚಿವರು ಈಗ ಸದನದ ಮುಂದೆ ಮಂಡಿಸಿದ್ದಾರೆ. ಅವರು ಈಗಾಗಲೇ ಪ್ರಸ್ತಾವಿಕ ಭಾಷಣದಲ್ಲಿ ಹೇಳಿದ ಪ್ರಕಾರ ಅಂತರ್‌ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಮಾಡಿಕೊಂಡಿರತಕ್ಕಂಥ ಒಂದು ಒಡಂಬಡಿಕೆಯಾಗಿದೆ. ಆದ್ದರಿಂದ ಈ ವಿಧೇಯಕವನ್ನು ನಮ್ಮ ರಾಜ್ ಕೂಡ ಸ್ವೀಕರಿಸಬೇಕಾದಂಥ ಅಗತ್ಯತೆ ಇದೆ ಎನ್ನತಕ್ಕಂಥದ್ದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯವಾಗಿದೆ. ಈ ವಿಷಯಕ್ಕೆ

ಸಂಬಂಧಪಟ್ಟಂತೆ ಕೆಲವು ಅಂಶಗಳನ್ನು ಸಂಕ್ಷಿಪ್ತವಾಗಿ ಮತ್ತು ಸೂಕ್ಷ್ಮವಾಗಿ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ನಾನು ಈ ಸಂದರ್ಭದಲ್ಲಿ ಹೆಚ್ಚಿಗೆ ಸಮಯ ತೆಗೆದುಕೊಳ್ಳದೆ ಕೆಲವು ವಿಷಯಗಳನ್ನು ಸಂಕ್ಷಿಪ್ತವಾಗಿ ಹೇಳುವುದಕ್ಕೆ ಬಯಸುತ್ತೇನೆ. ಈ ಒಂದು ವ್ಯಾಟ್ ವ್ಯವಸ್ಥೆ ಕಡ್ಡಾಯವಾಗಿ ಎಲ್ಲಾ ರಾಜ್ಯಕ್ಕೆ ಬರುತ್ತದೆ ಎಂದು 1999ನೇ ಇಸವಿಯಲ್ಲಿ ನಡೆದಂಥ ಅಖಿಲ ಭಾರತದ ಹಣಕಾಸಿನ ಸಚಿವರ ಸಮ್ಮೇಳನದಲ್ಲಿ ಇದು ಸ್ಪಷ್ಟವಾಗಿ ಗೋಚರವಾಗಿತ್ತು. ಗ್ಯಾಟ್ ಮತ್ತು ಡಬ್ಲ್ಯೂ.ಟಿ.ಓ. ಒಪ್ಪಂದದ ಮೇರೆಗೆ ಇವತ್ತಿನದಿವಸ ಇದೆಲ್ಲಾ ಬರುತ್ತಿದೆ. ಮತ್ತೆ ಏನು ಬರುತ್ತದೆಯೋ ಎನ್ನತಕ್ಕಂಥದ್ದನ್ನು ಮುಂದಿನ ದಿನಗಳಲ್ಲಿ ನೋಡಬೇಕಾಗುತ್ತದೆ. ಇವತ್ತಿನದಿವಸ ಡಬ್ಲ್ಯೂ. ಟಿ.ಓ. ಮತ್ತು ಗ್ಯಾಟ್ ಒಪ್ಪಂದ ಮಾಡಿಕೊಂಡಿರುವ ಕಾರಣ ಮುಂದಿನ ದಿನಗಳಲ್ಲಿ ಬರತಕ್ಕಂಥದ್ದನ್ನೆಲ್ಲಾ ನಾವು ಎದುರಿಸುಬೇಕಾಗುತ್ತದೆ. ಈಗ ವ್ಯಾಟ್ ಬಂದಿದೆ. ಅದನ್ನು ಈಗ ನಾವು ಎದುರಿಸೋಣ. ಮುಂದೆ ಬರತಕ್ಕಂಥದ್ದನ್ನು ಆನಂತರ ಎದುರಿಸೋಣ. ಇದಕ್ಕೆ ಸಂಬಂಧಪಟ್ಟಂತೆ ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, 1999ನೇ ಸಾಲಿನಲ್ಲಿ ಇದನ್ನು ಅಳವಡಿಸಬೇಕೆಂಬ ಎಲ್ಲರ ಅಭಿಪ್ರಾಯ ರೂಪಿತವಾದ ನಂತರ ನಮ್ಮ ರಾಜ್ಯ ಸರ್ಕಾರ ಇದಕ್ಕೆ ಸಂಬಂಧಪಟ್ಟಂತೆ ಪೂರ್ಣವಾದ ಸಿದ್ಧತೆಯನ್ನು ಮಾಡಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಎಲ್ಲವನ್ನೂ ಕ್ರೌನ್ ಸಂಸ್ಥೆಯವರಿಗೆ ವಹಿಸಿದ್ದೇವೆಂದು ಮತ್ತು ಅವರು ಎಲ್ಲವನ್ನೂ ತಯಾರು ಮಾಡಿದ್ದಾರೆಂದು ಮಾನ್ಯ ಸಚಿವರು ನಾನು ಇದರ ಬಗ್ಗೆ ಹೇಳಿದ ತಕ್ಷಣವೇ ಹೇಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಕ್ರೌನ್ ಸಂಸ್ಥೆಗೆ ಏಕೆ ಕೊಟ್ಟಿದ್ದೀರಿ ಎನ್ನತಕ್ಕಂಥ ವಿಚಾರವನ್ನು ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಸರ್ಕಾರದವರು ಏನು ಹೇಳುತ್ತಾರೆಯೋ ಅದನ್ನು ಅವರು ಮಾಡಬೇಕಾಗುತ್ತದೆ. ಇದಕ್ಕಾಗಿ ಎಷ್ಟು ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ ಎನ್ನತಕ್ಕಂಥ ವಿವರವನ್ನು ನಾನು ಕೇಳುವುದಕ್ಕೆ ಬಯಸುವುದಿಲ್ಲ. ಆದರೆ, ಇದಕ್ಕಿಂತ ಮೊದಲು ನಾನು ಕೇಳುವುದೇನೆಂದರೆ, ಮೌಲ್ಯ ವರ್ಧಿತ ತೆರಿಗೆ ಪದ್ಧತಿ ವಿದೇಶಗಳಲ್ಲಿ ಯಾವರೀತಿಯಲ್ಲಿ ಜಾರಿಯಲ್ಲಿದೆ ಎನ್ನತಕ್ಕಂಥದ್ದನ್ನು ಮತ್ತು ಇದನ್ನು ನಮ್ಮ ದೇಶದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಅಳವಡಿಸಿಕೊಂಡರೆ ಏನೇನು ಪರಿಣಾಮಗಳು ಆಗುತ್ತವೆ ಎನ್ನತಕ್ಕಂಥದ್ದನ್ನು ಅಧ್ಯಯನ ಮಾಡುವುದಕ್ಕೋಸ್ಕರ ಹಣಕಾಸಿನ ಸಚಿವರಾಗಿದ್ದಂಥ ಮಾನ್ಯ ಸಿದ್ಧರಾಮಯ್ಯನವರು ಅಧಿಕಾರಿಗಳ ಜೊತೆ ವಿದೇಶಕ್ಕೆ ಹೋಗಿ ಬಂದರು. ಆದರೆ, ಇದಕ್ಕೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಉತ್ತರ ಹೇಳಬೇಕಾದಂಥ ಪರಿಸ್ಥಿತಿ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ಅಧಿಕಾರಿಗಳು ಕೊಡತಕ್ಕಂಥ ಚೀಟಿಗಳ ಸಂಖ್ಯೆ ಜಾಸ್ತಿ ಆಗಬಹುದು. ಏಕೆಂದರೆ, ಇದಕ್ಕೆ ಸಂಬಂಧಪಟ್ಟಂತೆ ಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡು ಇಲ್ಲಿ ಹೇಳಬೇಕಾಗುತ್ತದೆ. 1996ನೇ ಇಸವಿಯಲ್ಲಿ ಮಾನ್ಯ ಸಿದ್ಧರಾಮಯ್ಯನವರ ನೇತೃತ್ವದ ಸಮಿತಿ ವಿದೇಶಕ್ಕೆ ಹೋಗಿ ಬಂದ ನಂತರ ಕೊಟ್ಟಂಥ ವರದಿ ಏನಾಯಿತು ಎನ್ನತಕ್ಕಂಥದ್ದನ್ನು ಮೊದಲು ಹೇಳಬೇಕು. ಏಕೆಂದರೆ, ವ್ಯಾಟ್ ವ್ಯವಸ್ಥೆ ನಮ್ಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ಜಾರಿಗೆ ಬಂದರೆ ಏನಾಗುತ್ತದೆ ಎನ್ನತಕ್ಕಂಥ ಅಭಿಪ್ರಾಯವನ್ನು ಅವರು ನೀಡಿರತಕ್ಕಂಥ ವರದಿಯಲ್ಲಿ ತಿಳಿಸಿದ್ದಾರೆ. ಆದ್ದರಿಂದ, ಆ ವರದಿಯನ್ನು ಸದನಕ್ಕೆ ಸಲ್ಲಿಸಬೇಕು. ಈ ಮಾತನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಇದರ ಆಗುಹೋಗುಗಳ ಬಗ್ಗೆ ಅವರು ನೀಡಿರತಕ್ಕಂಥ ವರದಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಏಕೆಂದರೆ, ವಿದೇಶಕ್ಕೆ ಹೋಗಿ ಬಂದಿರತಕ್ಕಂಥ ಪರಿಣಾಮ ನಮ್ಮ ರಾಜ್ಯದಲ್ಲಿ ಆಗಬೇಕಾಗುತ್ತದೆ. ಇದರಿಂದ ಲಾಭ ಅಥವಾ ನಷ್ಟವಾಗುತ್ತದೆಯೆ ಎನ್ನತಕ್ಕಂಥದ್ದು

ನನಗೆ ತಿಳಿಯಬೇಕು. ಆದ್ದರಿಂದ ಮಾನ್ಯ ಸಿದ್ಧರಾಮಯ್ಯನವರು ಅಧ್ಯಯನ ಪ್ರವಾಸ ಕೈಗೊಂಡು ನೀಡಿರತಕ್ಕಂಥ ವರದಿಯ ಅಂಶಗಳನ್ನು ಸರ್ಕಾರ ನಮಗೆ ತಿಳಿಯಪಡಿಸಬೇಕು. ಈ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು 1999ನೇ ಇಸವಿಯಲ್ಲಿ ನಮ್ಮೆಲ್ಲರಿಗೂ ಗೊತ್ತಿತ್ತು. ಅಧಿವೇಶನ ಇನ್ನು ಕೊನೇ 10 ದಿವಸ ಇರುವಾಗ ಈ ಒಂದು ಮಸೂದೆಯನ್ನು ಏಕೆ ತರಬೇಕಾಗಿತ್ತೆಂದು ಈ ಸಂದರ್ಭದಲ್ಲಿ ನಾನು ಕೇಳುತ್ತಿದ್ದೇನೆ. ಆರು ತಿಂಗಳಿಗೆ ಒಂದು ಸಾರಿ ಸದನ ಸೇರುತ್ತದೆ. ಆರು ತಿಂಗಳ ಹಿಂದೆಯೂ ಕೂಡ ಸದನ ಸೇರಿತ್ತು. ಆದರೆ, ಇದನ್ನು ಈಗ ತೆಗೆದುಕೊಂಡು ಬಂದು ಇನ್ನು 10 ದಿವಸ ಮಾತ್ರ ಉಳಿದಿದೆ ಮತ್ತು ಇದನ್ನು ರಾಷ್ಟ್ರಾಧ್ಯಕ್ಷರ ಸಹಿಗಾಗಿ ಕಳುಹಿಸಿಕೊಡಬೇಕೆಂದು ಹೇಳುತ್ತಿದ್ದೀರಿ. ಮತ್ತೆ ಇದು ರಾಷ್ಟ್ರಮಟ್ಟದಲ್ಲಿ ಆಗಿರತಕ್ಕಂಥ ಒಡಂಬಡಿಕೆ ಎಂದು ಹೇಳುವ ಬದಲು ಇದನ್ನು ಹಿಂದಿನ ಅಧಿವೇಶನದಲ್ಲಿ ಏಕೆ ತರಲಿಲ್ಲ ಎನ್ನತಕ್ಕಂಥದ್ದನ್ನು ನಾನು ಕೇಳುತ್ತಿದ್ದೇನೆ. ಇತ್ತಿನ ದಿವಸ ಇದನ್ನು ತರಾತುರಿಯಲ್ಲಿ ತರತಕ್ಕಂಥದ್ದರಿಂದ ಏನಾಗಿದೆ ಎಂದರೆ, ವ್ಯಾಪಾರಸ್ಥರೆಲ್ಲರೂ ಕಂಗಾಲಾಗಿದ್ದಾರೆ ಮತ್ತೆ ಎಲ್ಲಾ ಸಂಘ ಸಂಸ್ಥೆಗಳು ಇದನ್ನು ವಿರೋಧ ಮಾಡುತ್ತಿದ್ದಾರೆ. ಏಕೆಂದರೆ, ಇದರ ಬಗ್ಗೆ ಇವತ್ತಿನ ದಿವಸ ಯಾರಿಗೂ ಕೂಡ ಸ್ಪಷ್ಟತೆ ಇಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಸ್ಪಷ್ಟತೆ ಮೂಡಿಸುವುದಕ್ಕೋಸ್ಕರ ಇವರು ಕೆಲವು ಪುಸ್ತಕಗಳನ್ನು ಮಾಡಿ ಕೊಟ್ಟಿದ್ದಾರೆ. ಇದು ನಮ್ಮ ಹತ್ತಿರವೂ ಕೂಡ ಇದೆ. ಇದಕ್ಕೆ ಸಂಬಂಧಪಟ್ಟಂತೆ ಕೆಲವು ಕರಪತ್ರಗಳು ಮತ್ತು ರೂಲ್ ಪುಸ್ತಕಗಳು ಈಗಾಗಲೇ ಮಾರುಕಟ್ಟೆಯಲ್ಲಿ ಸಿಗುತ್ತಿವೆ. ಇವತ್ತಿನ ದಿವಸ ನಾವು ಇದನ್ನು ಇಲ್ಲಿ ಪಾಸ್ ಮಾಡದೇ ಹೋದರೆ ಏನಾಯಿತು. ಈಗಾಗಲೇ ಇದಕ್ಕೆ ಸಂಬಂಧಪಟ್ಟಂಥ ಎಲ್ಲಾ ಪುಸ್ತಕಗಳು ಮಾರುಕಟ್ಟೆಯಲ್ಲಿ ಸಿಗುತ್ತಿವೆ. ಆದರೆ, ಈ ಒಂದು ವ್ಯವಸ್ಥೆ ಬಗ್ಗೆ ಮತ್ತು ಇದರ ಆಗುಹೋಗುಗಳ ಬಗ್ಗೆ ಅನೇಕ ಸಂಘ ಸಂಸ್ಥೆಗಳಲ್ಲಿ ಮತ್ತು ವ್ಯಾಪಾರಸ್ಥರ ಸಂಘಟನೆಗಳಲ್ಲಿ ನಿರ್ದಿಷ್ಟವಾದ ಒಂದು ಸ್ಪಷ್ಟತೆ ಇಲ್ಲ. ಇದಕ್ಕೆ ಸಂಬಂಧಪಟ್ಟಂತೆ ನಮಗೆ ಸಾಕಷ್ಟು ಮನವಿಗಳು ಈಗಾಗಲೇ ಬಂದಿವೆ. ಹಾಗೆಯೇ ಬೇರೆ ರಾಜ್ಯದ ಸಂಧ ಸಂಸ್ಥೆಗಳು ಮತ್ತು ಸ್ಥಳೀಯ ಸಂಘಸಂಸ್ಥೆಗಳು ತಮ್ಮ ಸ್ಪಷ್ಟತೆಯನ್ನು ಈಗಾಗಲೇ ಸರ್ಕಾರಕ್ಕೆ ತಿಳಿಸಿದ್ದಾರೆ. ಸರ್ಕಾರ ಇದಕ್ಕೆ ಸಂಬಂಧಪಟ್ಟಂತೆ ಸರ್ಕಸ್ ಮಾಡುವುದರ ಬದಲು ಆರು ತಿಂಗಳ ಹಿಂದೆ ಅಥವಾ ಒಂದು ವರ್ಷದ ಹಿಂದೆಯೇ ವ್ಯಾಟ್ ವ್ಯವಸ್ಥೆಯನ್ನು 2003ನೇ ವರ್ಷದ ಏಪ್ರಿಲ್ ತಿಂಗಳಿಂದ ಜಾರಿಗೆ ತರುತ್ತೇವೆಂದು ಮತ್ತು ಇದಕ್ಕೆ ಸಂಬಂಧಪಟ್ಟಂಥ ಕಾನೂನು ಮತ್ತು ರೂಲ್ಸ್‌ಗಳು ಈ ರೀತಿ ಇವೆ ಎನ್ನತಕ್ಕಂಥದ್ದು ಮತ್ತು ಇದರ ಆಗುಹೋಗುಗಳು ಈ ರೀತಿ ಇವೆ ಎನ್ನತಕ್ಕಂಥದನ್ನು ಮೊದಲೇ ರಾಜ್ಯದ ಜನತೆಯ ಗಮನಕ್ಕೆ ತಂದಿದ್ದರೆ ಇವತ್ತಿನದಿವಸ ಈ ರೀತಿ ಆಗುತ್ತಿರಲಿಲ್ಲ. ಆದರೆ, ಈಗ ಕೊನೆಯ ಹಂತದಲ್ಲಿ ಇದನ್ನು ತಿಂದಿದ್ದೀರಿ.

ಶ್ರೀ ಡಿ.ಬಿ. ಚಂದ್ರೇಗೌಡ :– ಮಾನ್ಯ ಛೇರ್ಮನ್‌ರವರೆ, ನಾನು ಪ್ರಾರಂಭದಲ್ಲಿಯೇ ಇದಕ್ಕೆ ಸಂಬಂಧಪಟ್ಟಂತೆ ಹೇಳಿದ್ದೇನೆ. ಈ ತಿಂಗಳ ಮೂರನೇ ತಾರೀಖಿನಿಂದ ಇದು ನಮ್ಮ ಕಲಾಪಪಟ್ಟಿಯಲ್ಲಿ ಬರುತ್ತಿದೆ. ತರಾತುರಿ ಎಲ್ಲಿ ಆಗಿದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಸದರಿ ಅಧಿವೇಶನ ಪ್ರಾರಂಭವಾದ ದಿನಗಳಲ್ಲಿ ಅಥವಾ ಹಿಂದಿನ ಅಧಿವೇಶನದ ಅವಧಿಯಲ್ಲಿ ಇದನ್ನು ತರುವುದಕ್ಕೆ ಅವಕಾಶ ಇತ್ತು ಎನ್ನತಕ್ಕಂಥದ್ದನ್ನು ನಾನು ಹೇಳುತ್ತಿದ್ದೇನೆ. ಈಗ ಕೊನೆಯ ಹಂತದಲ್ಲಿ ಕಾಳಜಿ ತೋರಿಸುವ ಬದಲು ಆರು ತಿಂಗಳು ಅಥವಾ ಒಂದು ವರ್ಷದ ಹಿಂದೆ ಇದರ ಬಗ್ಗೆ ಕಾಳಜಿ ತೋರಿಸಿದ್ದರೆ ಈ ರೀತಿಯಾದ ಗೊಂದಲ

ಆಗುತ್ತಿರಲಿಲ್ಲ. ಈಗ ನಿರ್ಮಾಣವಾಗಿರುವ ಗೊಂದಲವನ್ನು ನಿವಾರಣೆ ಮಾಡುವ ದೃಷ್ಟಿಯಿಂದ ಇದನ್ನು ಮೊದಲೇ ತರಬೇಕಾಗಿತ್ತು ಎನ್ನತಕ್ಕಂಥ ವಿಷಯವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ವ್ಯಾಪಾರಸ್ಥರು ಮತ್ತು ಸಂಘ ಸಂಸ್ಥೆಗಳ ಜೊತೆ ಅಧಿಕಾರಿಗಳು ಕುಳಿತು ಸಭೆ ಮಾಡಬೇಕೆಂದು ಇವರು ಹೇಳಿದ್ದಾರೆ. ಅದರ ಪ್ರಕಾರ ಅಧಿಕಾರಿಗಳು ಅವರ ಜೊತೆ ಮಾತನಾಡಿ ಇವರು ಕೊಟ್ಟಿರತಕ್ಕಂಥ ಡ್ರಾಫ್ಟ್‌ನ್ನು ಅವರ ಮುಂದೆ ಓದಿ ಹೇಳಿದ್ದಾರಷ್ಟೆ. ಆದರೆ, ಇದರ ಬಗ್ಗೆ ಅವರಿಗೂ ಕೂಡ ಯಾವುದೇ ರೀತಿಯ ಒಂದು ಸ್ಪಷ್ಟತೆ ಇಲ್ಲದೇ ಇರತಕ್ಕಂಥದು ನಮಗೂ ಕೂಡ ಗೊತ್ತಿದೆ. ಇವತ್ತಿನ ದಿವಸ ನಾವೆಲ್ಲರೂ ಕೂಡ ಒಂದು ವಿಷಯವನ್ನು ಈ ಸದನದ ಮೂಲಕ ಮತ್ತು ಸಮಾಜದಲ್ಲಿ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನದಿವಸ ಸರ್ಕಾರಕ್ಕೆ ಮೋಸ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿರುವವರು ಶೇಕಡ 100ಕ್ಕೆ ಸುಮಾರು 4 ಪರ್ಸೆಂಟ್‌ನಷ್ಟು ಮಾತ್ರ ಇರಬಹುದು. ಆದರೆ, 100ಕ್ಕೆ 90ರಷ್ಟು ಜನರಲ್ಲಿ, ಅಂದರೆ ಇದರಲ್ಲಿ ಸಾಮಾನ್ಯ ಜನರಿರಬಹುದು ಅಥವಾ ವರ್ತಕರಿರಬಹುದು. ಎಲ್ಲಾ ವ್ಯವಸ್ಥೆಯಲ್ಲಿರುವವರು ಹೆರಾಸ್‌ಮೆಂಟ್ ಇಲ್ಲದೆ ಸರ್ಕಾರಕ್ಕೆ ಕೊಡಬೇಕಾಗಿರತಕ್ಕಂಥ ತೆರಿಗೆಯನ್ನು ಪ್ರಾಮಾಣಿಕವಾಗಿ ಕೊಡಬೇಕು ಎನ್ನತಕ್ಕಂಥ ಇಚ್ಛೆ ಅವರಿಗೆ ಇದೆ. ಆದ್ದರಿಂದ ವ್ಯಾಪಾರಸ್ಥರು ಕಳ್ಳರು ಎನ್ನತಕ್ಕಂಥ ಉದ್ದೇಶದಿಂದ ಕಾನೂನನ್ನು ರಚಿಸುವುದಾಗಲಿ ಅಥವಾ ಉಳಿದವರು ಒಳ್ಳೆಯವರು ಎಂದು ಮಾತನಾಡುವುದು ಸರಿಯಲ್ಲ. ಸಮಾಜದಲ್ಲಿ ಯಾವುದೇ ಕಿರುಕುಳ ಇಲ್ಲದೆ ಈ ಒಂದು ತೆರಿಗೆಯನ್ನು ಕೊಡುವುದಕ್ಕೆ ಜನರು ಸಿದ್ಧರಿರುವಾಗ, ಇದನ್ನು ಸಂಗ್ರಹ ಮಾಡತಕ್ಕಂಥದ್ದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಇವತ್ತಿನದಿವಸ ಸಮಾಜದಲ್ಲಿ ಯಾರು ಅಶಕ್ತರಿರುತ್ತಾರೆ. ಅವರಿಗೆ ಶಕ್ತಿ ಮೂಡಿಸುವಂಥ ದಿಕ್ಕಿನಲ್ಲಿ ತೆರಿಗೆಯ ಹಣ ಕೊಡುವಂಥ ಅಗತ್ಯತೆ ಇದೆ. ಆದ್ದರಿಂದ, ತೆರಿಗೆಯನ್ನು ಸಂಗ್ರಹ ಮಾಡಬೇಕಾಗುತ್ತದೆ. ಆದರೆ ಕಿರುಕುಳ ಇಲ್ಲದ ರೀತಿಯಲ್ಲಿ ತೆರಿಗೆ ಹಣವನ್ನು ಸಂಗ್ರಹ ಮಾಡಬೇಕಾಗಿರತಕ್ಕಂಥ ಅಗತ್ಯತೆ ಇದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ತೆರಿಗೆಯ ವ್ಯವಸ್ಥೆಯನ್ನು ಸರಳೀಕರಣಗೊಳಿಸುವ ದೃಷ್ಟಿಯಿಂದ ಇದನ್ನು ತರಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ನನಗೆ ಇನ್ನೂ ಸ್ಪಷ್ಟತೆ ಆಗಿಲ್ಲ. ಒಂದು ವೇಳೆ ಸರ್ಕಾರಕ್ಕೆ ಇದರ ಬಗ್ಗೆ ಸ್ಪಷ್ಟತೆ ಆಗಿದ್ದರೆ ಉತ್ತರ ನೀಡತಕ್ಕಂಥ ಸಂದರ್ಭದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ವ್ಯಾಟ್ ಪದ್ಧತಿ ಜಾರಿಗೆ ನಂತರ ಇದಕ್ಕೆ ಸಂಬಂಧಪಟ್ಟಂಥ ಇನ್ನೂ ಅನೇಕ ರೀತಿಯ ಮೈನರ್ ಆ್ಯಕ್ಟ್ ಇದೆ. ಉದಾಹರಣೆಗೆ ಹೇಳುವುದಾದರೆ, ಇವತ್ತಿನದಿವಸ ನಮ್ಮಲ್ಲಿರತಕ್ಕಂಥ ಎಂಟ್ರಿ ಟ್ಯಾಕ್ಸ್, ಪ್ರೊಫೆಷನಲ್ ಟ್ಯಾಕ್ಸ್ ಮತ್ತು ಸರ್ವಿಸ್ ಟ್ಯಾಕ್ಸ್ ಹಾಗೆಯೇ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ. ಹಾಗೆಯೇ ಇಷ್ಟೆಲ್ಲಾ ಸರಳೀಕರಣಗೊಳಿಸುತ್ತೇವೆಂದು ಮಾತ್ರ ಹೇಳುತ್ತಿದ್ದೀರಿ. ಕೆಎಸ್‌ಟಿ 80 ಪರ್ಸೆಂಟ್ ನಷ್ಟು ಭಾಗ ಇದರಲ್ಲಿ ಇದೆ. ಮತ್ತೆ ಸಿಎಸ್‌ಟಿ ಕೂಡ ಮುಂದುವರಿಯುವುದಾದರೆ ಮತ್ತು ಪೆಟ್ರೋಲಿಯಂ ಪ್ರಾಡೆಕ್ಟ್ಸ್ ನಮ್ಮಗೆಲ್ಲಾ ಗೊತ್ತಿರುವ ಹಾಗೆ ಇದರಲ್ಲಿ ಅನ್ವಯವಾಗುವುದಾದರೆ, ಇದನ್ನು ಸರಳೀಕರಣ ಗೊಳಿಸುವಂಥ ಅರ್ಥ ಏನು? ಎಲ್ಲಾ ಟ್ಯಾಕ್ಸ್ ಹಾಗೆಯೇ ಇದ್ದರೂ ಕೂಡ ಇದನ್ನು ಸರಳೀಕರಣಗೊಳಿಸುತ್ತೇವೆಂದು ಸರ್ಕಾರ ಹೇಳಿದರೆ, ಇದಕ್ಕೆ ಏನು ಅರ್ಥ ಬರುತ್ತದೆ ಎನ್ನತಕ್ಕಂಥದ್ದು ಜನತೆಗೂ ಸ್ಪಷ್ಟವಾಗುತ್ತಿಲ್ಲ. ಹಾಗೆಯೇ ನಮಗೂ ಕೂಡ ಸ್ಪಷ್ಟವಾಗುತ್ತಿಲ್ಲ. ಯಾವ ಹಂತದಲ್ಲಿ ತೆರಿಗೆಗಳು ಹೋಗುತ್ತವೆ ಎನ್ನತಕ್ಕಂಥದ್ದು ಗೊತ್ತಾಗಬೇಕು. ಉದಾಹರಣೆಗೆ ಹೇಳುವುದಾದರೆ, ಸಿ.ಎಸ್.ಟಿ. ಇನ್ನು ಎರಡು ವರ್ಷಗಳವರೆಗೆ ಮಾತ್ರ

ಮುಂದುವರಿಯುತ್ತದೆ. ಆನಂತರ ರದ್ದು ಆಗುತ್ತದೆಯೇ ಎನ್ನತಕ್ಕಂಥದ್ದನ್ನೂ ಸರ್ಕಾರ ಸ್ಪಷ್ಟಪಡಿಸತಕ್ಕಂಥ ಅಗತ್ಯತೆ ಇದೆ. ಮತ್ತು ವಿವಿಧ ಹಂತದಲ್ಲಿ ಮತ್ತು ವಿವಿಧ ರೀತಿಯ ಟ್ಯಾಕ್ಸ್‌ನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಆದ್ದರಿಂದ ಇದರ ಬಗ್ಗೆ ಒಂದು ಸ್ಪಷ್ಟತೆಯನ್ನು ಮೂಡಿಸಬೇಕು. ಇಲ್ಲದಿದ್ದರೆ ಈ ರೀತಿಯ ಟ್ಯಾಕ್ಸ್ ವ್ಯವಸ್ಥೆ ಇಟ್ಟುಕೊಂಡು ಮತ್ತೆ ಸರಳೀಕರಣಗೊಳಿಸುತ್ತೇವೆಂದು ಹೇಳುವುದರಲ್ಲಿ ಏನೂ ಅರ್ಥ ಇಲ್ಲ.

ಛೇರ್ಮನ್ :- ಇದಕ್ಕೆ ಸಂಬಂಧಪಟ್ಟಂತೆ ಏನಾದರು ಸ್ಪೆಸಿಫಿಕ್ ಸಜೆಷನ್ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಛೇರ್ಮನ್‌ರವರೆ, ಉಳಿದ ಹಂತದ ಟ್ಯಾಕ್ಸ್ ಏನಿವೆ, ಅವುಗಳನ್ನು ತೆಗೆಯತಕ್ಕಂಥ ಅಗತ್ಯತೆ ಇದೆ. ಇವೆಲ್ಲವನ್ನೂ ಸರಳೀಕರಣಗೊಳಿಸುವುದಕ್ಕೋಸ್ಕರವೇ ಇದನ್ನು ತರಲಾಗಿದೆ. ಆದ್ದರಿಂದ ಸರಳೀಕರಣಗೊಳಿಸುವುದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಪ್ರಯತ್ನಗಳು ಸರ್ಕಾರದ ಕಡೆಯಿಂದ ಆಗಬೇಕೆಂದು ಹೇಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಇನ್ನು ಅನೇಕ ರೀತಿಯ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿದೆ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ಆ್ಯಕ್ಟ್ ಮತ್ತು ರೂಲ್ಸ್‌ನ್ನು ಅಧಿಕಾರಿಗಳು ಸಿದ್ಧಪಡಿಸಿರತಕ್ಕಂಥದ್ದು ಒಂದು ಭಾಗ. ಆದರೆ, ಒಂದು ಪ್ರಮುಖವಾದ ಒಂದು ವಿಷಯವನ್ನು ಈ ಸಂದರ್ಭದಲ್ಲಿ ಸರ್ಕಾರ ಸ್ಪಷ್ಟಪಡಿಸಬೇಕು. ಅದೇನೆಂದರೆ, 4 ಪರ್ಸೆಂಟ್ ಟ್ಯಾಕ್ಸ್ ಅಡಿಯಲ್ಲಿ ಬಡವರು ಉಪಯೋಗಿಸತಕ್ಕಂಥ ಮತ್ತು ಇದುವರೆಗೆ ಟ್ಯಾಕ್ಸ್ ಎಗ್ಜೆಮ್ಷನ್ ಇದ್ದಂಥ ಅನೇಕ ವಸ್ತುಗಳು ಇದರಲ್ಲಿ ಸೇರಿಕೊಂಡಿದ್ದವು. ನಮ್ಮ ಸರ್ಕಾರಕ್ಕೆ ಯಾವುದರ ಮೇಲೆ ಕಣ್ಣು ಬೀಳುತ್ತದೆಯೋ ಗೊತ್ತಿಲ್ಲ. ಕೇಂದ್ರ ಸರ್ಕಾರದ ಈ ಒಂದು ಮೌಲ್ಯವರ್ಧಿತ ತೆರಿಗೆ ವ್ಯವಸ್ಥೆಯಲ್ಲಿ ಇದು ಅಂತ ಆದರೆ ಅನಿವಾರ್ಯ ಅದರಿಂದ ಯಾವರೀತಿಯಾಗಿ ಹೊರಗೆ ಬರಬೇಕು ಎನ್ನತಕ್ಕಂಥದ್ದನ್ನು ನಾವು ಅಧಿಕಾರಿಗಳಿಗೆ ಸೂಚಿಸಿ ಅದರಿಂದ ಹೊರಗೆ ಬರುವುದಕ್ಕೆ ಮಾರ್ಗವನ್ನು ಇಟ್ಟುಕೊಳ್ಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಇದುವರೆಗೆ ಮಂಗಳಸೂತ್ರಕ್ಕೆ ಟ್ಯಾಕ್ಸ್ ಇರಲಿಲ್ಲ. ಆದರೆ, ಈಗ ಮಂಗಳ ಸೂತ್ರಕ್ಕೆ ಟ್ಯಾಕ್ಸ್ ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಮತ್ತೆ ಹಿಟ್ಟು ಮತ್ತು ರವೆ, ಅಕ್ಕಿಗೆ ಟ್ಯಾಕ್ಸ್ ಇರಲಿಲ್ಲ. ಆದರೆ ಇವತ್ತು 4 ಪರ್ಸೆಂಟ್ ಟ್ಯಾಕ್ಸ್ ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಈ ಅಲ್ಯೂಮಿನಿಯಂ ಪಾತ್ರೆಗಳನ್ನು ಉಪಯೋಗಿಸುವವರು ಬಗ್ಗೆ ನಿಮಗೂ ಮತ್ತು ನಮಗೂ ಗೊತ್ತಿದೆ. ಇವತ್ತಿನದಿವಸ ಅಲ್ಯೂಮಿನಿಯಂ ಪಾತ್ರೆಗಳಿಗೆ 4 ಪರ್ಸೆಂಟ್ ಟ್ಯಾಕ್ಸ್ ಕೊಡುವಂತಹ ಸ್ಥಿತಿ ಬಂದಿದೆ. ಬ್ರೆಡ್ ಮತ್ತು ಬನ್ ಇದಕ್ಕೆ ಟ್ಯಾಕ್ಸ್ ಹಾಕಿರುವ ಬಗ್ಗೆ ಮಾನ್ಯ ಸಚಿವರು ಹೇಳಿದರು. ಅದಕ್ಕೆ 4 ಪರ್ಸೆಂಟ್ ಟ್ಯಾಕ್ಸ್ ಹಾಕಿರುವಂತಹ ಸ್ಥಿತಿಯಾಗಿದೆ. ಗಿಡ ಮತ್ತು ಬೇರುಗಳಿಂದ ತಯಾರಿಸಿರುವಂತಹ ಆಯುರ್ವೇದಿಕ್ ಔಷಧಿಗಳು ಅದಕ್ಕೆ ನಾಲ್ಕು ಪರ್ಸೆಂಟ್ ಟ್ಯಾಕ್ಸ್ ಕೊಡುವಂಥದ್ದು, ಹೀಗೆ ನಾವು ಪ್ರತಿಯೊಂದು ಸಾಮಾನ್ಯ ಜನರು ಬಳಸುವಂತಹ ವಸ್ತುಗಳು ಯಾವುದು ಇದೆಯೋ ಅದಕ್ಕೆ ಟ್ಯಾಕ್ಸ್ ಹೆಚ್ಚಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಮೌಲ್ಯವರ್ಧಿತ ತೆರಿಗೆಯಲ್ಲಿ ವಿನಾಯಿತಿಗೊಳ್ಳಲಾದ ಸರಕುಗಳು ಅನುಬಂಧ-2 ಬಜೆಟ್ ಪುಸ್ತಕದಲ್ಲಿ ಕೊಟ್ಟಿದ್ದೀರಲ್ಲಾ ಅದರಡಿಯಲ್ಲಿ ಇಂತಹದ್ದನ್ನು ಸೇರಿಸಬೇಕಾದಂತಹ ಅಗತ್ಯತೆ ಇದೆ. ಆ ದಿಕ್ಕಿನಲ್ಲಿ ಆ ದೃಷ್ಟಿಯಿಂದ ಸರ್ಕಾರ ಯೋಚನೆಯನ್ನು ಮಾಡಿ ಈ ರೀತಿಯಾಗಿ ಬಡವರು ಉಪಯೋಗ ಮಾಡುವಂತಹ ಕೃಷಿ ಕಾರ್ಮಿಕರು ಉಪಯೋಗ ಮಾಡುವಂತಹ ಅಥವಾ ಸಮಾಜದಲ್ಲಿ ಅತ್ಯಂತ ತುಳಿತಕ್ಕೆ ಒಳಗಾಗುವಂತಹ ಜನರು ಉಪಯೋಗಿಸುವಂತಹ ವಸ್ತುಗಳ ಯಾವ ಪಟ್ಟಿ

ಇದೆಯೋ ಅದರ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕಾದಂತಹ ಅಗತ್ಯತೆ ಇದೆ. ಸರ್ಕಾರ ಈ ಎಲ್ಲಾ ವಸ್ತುಗಳ ಬಗ್ಗೆ ಅದಕ್ಕೆ ಟ್ಯಾಕ್ಸ್ ಅನ್ವಯವಾಗಬಾರದು ಆ ರೀತಿಯಾದಂತಹ ಒಂದು ಪ್ರಯತ್ನವನ್ನು ಮಾಡಬೇಕಾದಂತಹ ಅಗತ್ಯವಿದೆ. ಇನ್ನೊಂದು ಪ್ರಮುಖವಾಗಿ ಈ ಆ್ಯಕ್ಟ್‌ನಲ್ಲಿ ಗೊಂದಲವಿರುವುದು ಈ ಉತ್ಪಾದಕರಿಂದ ನಾವು ಇದುವರೆವಿಗೂ ಬೇರೆ ಬೇರೆ ಹಂತಗಳಲ್ಲಿ ಡಿಸ್ಟಿಬ್ಯೂಟರ್ ಹೋಲ್ ಸೇಲರ್; ಮತ್ತು ರೀಟೈಲರ್ ಈ ನಾಲ್ಕು ಹಂತಗಳಲ್ಲಿ ನಾವು ಟ್ಯಾಕ್ಸ್‌ನ್ನು ಸಂಗ್ರಹ ಮಾಡುವಂತಹದ್ದು ಇದೆ. ಮಾನ್ಯ ಫ್ಯಾಕ್ಟರ್‌ರಿಗೆ ಅಥವಾ ನಮ್ಮ ಡಿಸ್ಟಿಬ್ಯೂಟರ್‌ಗಳಿಗೆ ಹೋಲ್‌ಸೇಲರ್ ತನಕದ ನಮ್ಮ ಈ ಟ್ಯಾಕ್ಸ್ ಪದ್ಧತಿಯಲ್ಲಿ ನಮಗೆ ತೊಂದರೆಗಳಾಗುವುದಿಲ್ಲ. ಆದರೆ ಇಲ್ಲಿ ರಿಟೇಲರ್‌ಗಳಿಗೆ ಬಂದಾಗ ಅಲ್ಲಿ ಈ ಟ್ಯಾಕ್ಸೇಷನ್‌ನ ಈ ವ್ಯವಸ್ಥೆಯಿಂದಾಗಿ ಅನೇಕ ರೀತಿಯಾದ ತೊಂದರೆಗಳಾಗುವುದನ್ನು ನಾವು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಒಂದು ದೊಡ್ಡ ಸಮಸ್ಯೆಗಳು ಉಂಟಾಗಿರುವುದು ಮ್ಯಾನ್ಯುಫ್ಯಾಕ್ಚರರ್ ರಿಟೇಲರ್ ಲಾಸ್ಟ್ ಪಾಯಿಂಟ್ ಅವರು ವಸ್ತುಗಳನ್ನು ತರಿಸಿಕೊಟ್ಟರೆ ಈ ಟ್ಯಾಕ್ಸ್‌ನ್ನು ವ್ಯವಸ್ಥೆ ಏನಾಗುತ್ತದೆ ಎಂಬುದರ ಬಗ್ಗೆ ನಮಗೆ ಅರ್ಥವಾಗುತ್ತಿಲ್ಲ. ಈ ಮ್ಯಾನುಫ್ಯಾಕ್ಚರರ್ ಮಾಡಿರುವಂತಹ ಪಾಯಿಂಟ್‌ನಿಂದ ಡೈರೆಕ್ಟ್ ರಿಟೇಲರ್ ತನಕ ನಾವು ಆ ಒಂದು ರೀತಿಯಾದಂತಹ ವಸ್ತುಗಳನ್ನು ತರಿಸಿಕೊಂಡಾಗ ಇಲ್ಲಿ ಟ್ಯಾಕ್ಸ್ ವ್ಯವಸ್ಥೆಗಳು ಹೇಗಾಗುತ್ತದೆ? ಏಕೆಂದರೆ, ಇಲ್ಲಿ ಡಿಸ್ಟಿಬ್ಯೂಟರ್ ಮತ್ತು ಹೋಲ್‌ಸೇಲರ್‌ಗಳು ಮಧ್ಯದಲ್ಲಿ ತಪ್ಪಹೋಗುತ್ತಾರೆ. ಹಾಗಾಗಿ ಅಲ್ಲಿ ಟ್ಯಾಕ್ಸ್ ಲ್ಯಾಡ್ ಆಗುವುದಕ್ಕೆ ಅವಕಾಶಗಳಲ್ಲಿ ಮಾರ್ಕೆಟ್‌ನಲ್ಲಿ ಈ ರೀತಿಯಾಗಿ ನಂ:2 ಇನ್ನೊಂದು ರೀತಿಯಲ್ಲಿ ಆಗುವುದಕ್ಕೆ ಅವಕಾಶಗಳಾಗಬಹುದು. ಹಾಗಾಗಿ ಮ್ಯಾನ್ಯುಫ್ಯಾಕ್ಚರರ್‌ಟು ರಿಟೇಲರ್‌ಗಳು ತರಿಸಿಕೊಳ್ಳುವಂತದ್ದು ಈಗಲೂ ಇದೆ. ಅದು It is a fundamental right ನಾವು ತರಿಸಿಕೊಳ್ಳುವುದಕ್ಕೆ ನೀವ್ಯಾರು ಅಡ್ಡಿಪಡಿಸುವುದಕ್ಕೆ ಎಂದು ನಾವು ಸರ್ಕಾರವನ್ನು ಕೇಳುವುದಕ್ಕೆ ನಮಗೂ ಹಕ್ಕು ಇದೆ. ಅದು ಪ್ರಶ್ನೆ ಬೇರೆಯಾಗಿದೆ. ಈ ವ್ಯಾಟ್‌ನಲ್ಲಿ ಮ್ಯಾನ್ಯುಫ್ಯಾಕ್ಚರರ್ ಟು ರಿಟೇಲರ್ ಇದನ್ನು ತಂದಾಗ ಯಾವ ರೀತಿಯಾದಂತಹ ವ್ಯವಸ್ಥೆಗಳಾಗುತ್ತದೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕಾಗುತ್ತದೆ ಎಂದು ಹೇಳುತ್ತೇನೆ. ಇನ್ನೊಂದು ನಾನು ಬಹಳ ಸಂಕ್ಷಿಪ್ತವಾಗಿ ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಸೆಕ್ಷನ್-38,39ರಲ್ಲಿ ನಮ್ಮ ಅಸೆಸ್‌ಮೆಂಟ್ ಮತ್ತು ರೀ ಅಸೆಸ್‌ಮೆಂಟ್‌ನಲ್ಲಿ ಅದೇನೂ ಈಗ ವ್ಯತ್ಯಾಸಗಳಿದ್ದರೆ ಈ ಸ್ಥಳೀಯವಾದಂತಹ ಈ ಆಫೀಸ್‌ಗಳಲ್ಲಿ ಅಂದರೆ ಸಿಟಿ ಕಛೇರಿಗಳಲ್ಲಿ ನಾವು ಇವುಗಳ ಬಗ್ಗೆ ಕಾಗದ ಮತ್ತು ಲೆಕ್ಕಪತ್ರಗಳನ್ನು ಸರಿಮಾಡಿಸಿಕೊಳ್ಳುತ್ತಿದ್ದೆವು. ನಾವು ಸರ್ಕಾರ ಈ ವಿಕೇಂದ್ರಿಕರಣ ವ್ಯವಸ್ಥೆ ಎಂದು ಹೇಳುವವರು ನಾವು ಕಂಪ್ಯೂಟರ್ ಯುಗದಲ್ಲಿ ನಾವು ಆಡಳಿತವನ್ನು ಮಾಡುತ್ತಿದ್ದೇವೆ. ಆದರೆ ಇವತ್ತು ಇದರಿಂದ ಏನಾಗುತ್ತದೆಂದರೆ, ಕೇಂದ್ರಿಕೃತವಾದಂತಹ ಒಂದು ವ್ಯವಸ್ಥೆ ಬರುತ್ತದೆ. ಅಸೆಸ್‌ಮೆಂಟ್ ಮತ್ತು ರೀ ಅಸೆಸ್‌ಮೆಂಟ್‌ನಲ್ಲಿ ಏನಾದರೂ ವ್ಯತ್ಯಾಸಗಳು ಆಗಿದ್ದರೆ, ಮೊದಲಿನ ತರಹ ಲೋಕಲ್ ಆಫೀಸ್‌ಗಳಲ್ಲಿ ಆಗುವುದಿಲ್ಲ. ಈಗ ಅದು ಡಿವಿಷನ್ ಮಟ್ಟದಲ್ಲಿ ಅದನ್ನು ಸರಿಪಡಿಸಿಕೊಳ್ಳ ಬೇಕಾದಂತಹ ವ್ಯವಸ್ಥೆ ಬರುತ್ತದೆ. ಇದರಿಂದಾಗಿ ಕೇಂದ್ರಿಕೃತವಾದಂತಹ ವ್ಯವಸ್ಥೆಗಳು ನಿರ್ಮಾಣಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಲೋಕಲ್ ಆಫೀಸರ್‌ಗಳು ಬರೀ ರಿಜಿಸ್ಟ್ರೇಷನ್‌ನ್ನು ಮಾತ್ರ ಇನ್ನು ಮುಂದೆ ಮಾಡುವವರಾಗುತ್ತಾರೆ. ಅವರಿಗೆ ಇನ್ನೇನೂ ಕೆಲಸಗಳಿಲ್ಲ. ಇವರು ಕೊಟ್ಟಿರುವಂತಹ ಅಸೆಸ್‌ಮೆಂಟ್ ಫಾರಂಗಳನ್ನು ತೆಗೆದುಕೊಂಡು ಕಂಪ್ಯೂಟರ್‌ಗೆ ಫೀಡ್

ಮಾಡುವುದು, ರಿಜಿಸ್ಟ್ರೇಷನ್‌ಗೆ ಏನು ಮಾಡಬೇಕೋ ಅದನ್ನು ಮಾಡುವುದು ಈ ರೀತಿಯಾದ ಕೆಲಸ ಇದು ಲೋಕಲ್ ಮಟ್ಟದಲ್ಲಿ ಆಗುವಂತಹ ಬೇಕಾದಂತಹ ರೀತಿಯಲ್ಲಿ ಸರ್ಕಾರ ಯೋಚಿಸಬೇಕಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಸೆಕ್ಷನ್-22ರಲ್ಲಿ ಇನ್ನೊಂದು ಬಹಳ ಪ್ರಮುಖವಾಗಿರುವಂತಹದ್ದು ರಿಜಿಸ್ಟ್ರೇಷನ್‌ಗೆ ಸಂಬಂಧಪಟ್ಟಿರುವಂತೆ ಈ ನಾನ್ ರೆಸಿಡೆಂಟ್ ಡೀಲರ್ಸ್‌ಗಳು ಏನಿದ್ದಾರೆ ಅಥವಾ ಕ್ಯಾಜುವಲ್ ಟ್ರೇಡರ್ಸ್ ಈಗ ಸುತ್ತಮುತ್ತಲು ವಸ್ತುಪ್ರದರ್ಶನಗಳಾಗುತ್ತವೆಯಲ್ಲಾ ಬೆಂಗಳೂರಿನಲ್ಲಿರಬಹುದು ಅಥವಾ ಬೇರೆ ಬೇರೆ ಕಡೆಗಳಲ್ಲಿರಬಹುದು, ಇವರನ್ನು ಈ ಟ್ಯಾಕ್ಸ್ ವ್ಯವಸ್ಥೆಯಲ್ಲಿ ಹೇಗೆ ತರುತ್ತಾರೆ ಎನ್ನುವುದನ್ನೂ ಕೂಡ ಸ್ಪಷ್ಟಪಡಿಸಬೇಕು. ಅವರು ಅಲ್ಲಿ ವ್ಯಾಪಾರ ಪ್ರಾರಂಭ ಮಾಡುವುದಕ್ಕೆ ಮುಂಚೆಯೇ ರಿಜಿಸ್ಟ್ರೇಷನ್ ಮಾಡಿಕೊಂಡು ಅಡ್ವಾನ್ಸ್‌ನ್ನು ಕೊಟ್ಟು ಅವರಿಗೆ ಯಾವುದಾದರೂ ರೀತಿಯಲ್ಲಿ ಅವರನ್ನು ಈ ಲೆಕ್ಕಕ್ಕೆ ಒಳಪಡುವಂತಹ ರೀತಿಯಲ್ಲಿ ಮಾಡುತ್ತಾರೋ ಅಥವಾ ಅವರೇನಾದರೂ ಹಣವನ್ನು ನಾಮಿನಲ್ ಆಗಿ ಸರ್ಕಾರಕ್ಕೆ ತುಂಬಿ ಹಾಗೆಯೇ ಅವರು ಹೋಗುವುದಕ್ಕೆ ಅವಕಾಶವಿದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕು. ಇವತ್ತಿನದಿವಸ ಈ ಎಕ್ಸಿಬಿಷನ್ಸ್ ದೊಡ್ಡಪ್ರಮಾಣದಲ್ಲಿ ಇಡೀ ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಹಾಗಾದರೆ ಈ ರೀತಿಯ ವಸ್ತು ಪ್ರದರ್ಶನಗಳು ಆದಾಗ ಲೋಕಲ್ ಮಾರ್ಕೆಟ್ ಮೇಲೆ ಅದರ ಪರಿಣಾನವಾಗುತ್ತದೆ. ನಾವು ನಮ್ಮ ಅಂಗಡಿಯನ್ನು ತಲೆತಲಾಂತರಗಳಿಂದ ನಡೆಸಿಕೊಂಡು ಬಂದಿರುತ್ತೇವೆ, ಯಾರೋ ಒಬ್ಬ ಬಂದು ಹೊರರಾಜ್ಯದವರು ಯಾರೋ ಇಲ್ಲಿ ಬಂದು ಒಂದು ವಸ್ತುಪ್ರದರ್ಶನವನ್ನು ಮಾಡಿ ಹೊರಟುಹೋಗುತ್ತಾರೆ. ಇವನಿಗೆ ವರ್ಷಕ್ಕೆ ಆಗುವಂತಹ ವ್ಯಾಪಾರವೆಲ್ಲಾ ಅವನಿಗೆ ಒಂದೇ ಒಂದು ದಿನದಲ್ಲಿ ಆಗಿಬಿಡುತ್ತದೆ. ಆದರೆ ಇದಕ್ಕೆ ನಮ್ಮ ಅಕೌಂಟಿಂಗ್ ಸಿಸ್ಟಮ್ ಒಳಗಡೆ ಇದರಲ್ಲಿ ಎಲ್ಲಿಯಾದರೂ ಒಂದು ಕಡೆಯಲ್ಲಿ ಅವನು ಮೊದಲೇ ರಿಜಿಸ್ಟರ್ ಮಾಡಿಕೊಂಡು, ಮೊದಲೇ ಇಷ್ಟು ಹಣವನ್ನು ಕೊಡಬೇಕೆಂದು ಮಾಡಿ ಅವರಿಗೆ ಸ್ಪಷ್ಟವಾದಂತಹ ಈ ಒಂದು ಕ್ಯಾಜುವಲ್ ಟ್ರೇಡರ್ಸ್ ಕುರಿತಂತೆ ಸ್ಪಷ್ಟವಾದಂತಹ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಸೆಕ್ಷನ್ 22(9) ಒಳಗಡೆ ಇದನ್ನು ಸ್ಪಷ್ಟಪಡಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸೆಕ್ಷನ್-52(ಡಿ)ಯಲ್ಲಿ ಇದುವರೆವಿಗೂ ನಮಗೆ ಏನಿತ್ತೆಂದರೆ, ಯಾವುದಾದರೂ ಲೆಕ್ಕ ತಪಾಸಣೆಯಲ್ಲಿ ವ್ಯತ್ಯಾಸಗಳು ಬಂದರೆ ಅಥವಾ ಇನ್ಯಾವುದೇ ರೀತಿಯ ಅನುಮಾನಗಳು ಬಂದರೆ, ವ್ಯಕ್ತಿಗಳು ತಪಾಸಣೆಗೆ ಮನೆಗೆ ಅಥವಾ ಮಳಿಗೆಗಳಿಗೆ ಹೋಗಬಹುದಿತ್ತು. ಆದರೆ ಮ್ಯಾಜಿಸ್ಟ್ರೇಟರ್ ಒಂದು ಸರ್ಚ್‌ವಾರೆಂಟನ್ನು ತೆಗೆದುಕೊಂಡು ಹೋಗಬೇಕಾಗಿತ್ತು. ಆದರೆ ಇನ್ನು ಮುಂದೆ ಏನಾಗುತ್ತದೆಂದರೆ, ಸೆಕ್ಷನ್-52(3) ಪ್ರಕಾರ ಜಂಟಿ ಆಯುಕ್ತರ ಅಥವಾ ಮೇಲಾಧಿಕಾರಿಗಳು ಪರವಾನಗಿಯನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ನೀವು ಅಧಿಕಾರಿಗಳಿಗೆ ಅಂದರೆ ಇನ್ನಷ್ಟು ಹೆಚ್ಚು ಅಧಿಕಾರವನ್ನು ಕೊಡುವಂತಹದ್ದು ಇದೆ. ಆದರೆ ಇದುವರೆವಿಗೆ ಮ್ಯಾಜಿಸ್ಟ್ರೇಟ್‌ರಿಂದ ಸರ್ಚ್‌ವಾರೆಂಟ್ ತೆಗೆದುಕೊಂಡು ಹೋಗಬೇಕಾದಂತಹ ಸ್ಥಿತಿ ಇದ್ದಿದ್ದರಿಂದ ಇದಕ್ಕೆ ಸ್ವಲ್ಪ ಬಿಗುವಾದಂತಹ ಮತ್ತು ಹೆದರಿಕೆ ಸರ್ಕಾರದಲ್ಲಿರುತ್ತಿತ್ತು. ಏಕೆಂದರೆ ನಾವು ಮ್ಯಾಜಿಸ್ಟ್ರೇಟರ ಹತ್ತಿರ ಹೋಗಬೇಕಾಗುತ್ತದೆ. ಅವರ ಹತ್ತಿರ ನಾವು ಹೋಗಿ ಸರ್ಚ್ ವಾರೆಂಟ್ ತೆಗೆದುಕೊಂಡು ಹೋಗುವಂಥದ್ದು ಈಗ ಹಾಗಲ್ಲ, ಅವರು ಜಂಟಿ ಆಯುಕ್ತರು ಮತ್ತು ಮೇಲಾಧಿಕಾರಿಗಳು ಅವರು ಅದಕ್ಕೆ ಅವಕಾಶವನ್ನು ಕೊಡುತ್ತಾರೆ ಇದರ ಬಗ್ಗೆ ಜಂಟಿ

ಆಯುಕ್ತರು ಯಾರು ಇರುತ್ತಾರೆ ಅವರು ಮೇಲಾಧಿಕಾರಿಗಳು ಹೇಗೆ ಇರುತ್ತಾರೆಂದು ನಿಮಗೆ ಗೊತ್ತಿದೆ. ಸರ್ಕಾರದಿಂದ ಒಂದು ನಿರ್ದೇಶನ ಹೋದರೆ ಯಾರ ಮೇಲೆ ಎಷ್ಟು ಹೊತ್ತಿಗೆ ಬೇಕಾದರೂ, ಹೇಗೆ ಬೇಕಾದರೂ ಇವರು ತನಿಖೆಗೆ ಒಳಪಡಿಸಬಹುದೆಂಬ ಅವಕಾಶಗಳು ಲಭ್ಯವಾಗುತ್ತದೆ. ಸರ್ಕಾರದ ಎಲ್ಲೋ ಒಂದು ಕಡೆಗೆ ಇದನ್ನು ರಾಜಕೀಯವಾಗಿ ಈ ಸೆಕ್ಷನ್‌ನ್ನು ಬಳಸಿಕೊಳ್ಳುವುದಕ್ಕೆ ಬರಬಾರದೇ ಇರುವ ರೀತಿಯಲ್ಲಿ ಯೋಚನೆ ಮಾಡಬೇಕಾದಂತಹ ಅಗತ್ಯತೆ ಇದೆ. ಇಲ್ಲದಿದ್ದರೆ ಇದರಲ್ಲಿ ರಾಜಕೀಯ ದುರುಪಯೋಗವಾಗಬಹುದು ಈ ಸೆಕ್ಷನ್ ಪ್ರಕಾರ ರಾಜಕೀಯ ದುರುಪಯೋಗವಾಗುವಂತಹ ಎಲ್ಲಾ ಅವಕಾಶಗಳು ಇರುತ್ತದೆ. ಹಾಗಾಗಿ ಅದು ಈಗ ಅದು ಮ್ಯಾಜಿಸ್ಟ್ರೇಟರವರಲ್ಲಿಯೇ ಈ ಸರ್ಚ್ ವಾರೆಂಡ್ ತೆಗೆದುಕೊಳ್ಳುವಂತಹದ್ದು ಏನಿದೆ, ಅದೇ ಮುಂದುವರಿಯಬೇಕು. ಇನ್ನು ಬೇರೆ ರೀತಿಯಲ್ಲಿ ತೊಂದರೆಯಾಗದ ಹಾಗೆ ವಿಶೇಷವಾದಂತಹ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ಷೆಡ್ಯೂಲ್-4ರಲ್ಲಿ ಲಿಕ್ಕರ್‌ಗೆ 20 ಪರ್ಸೆಂಟ್ ಇರುವುದನ್ನು ಎಕ್ಸೈಸ್‌ನವರೇ ಮುಂದುವರಿಸುತ್ತೇವೆಂದು ಸರ್ಕಾರ ಬಜೆಟ್‌ನಲ್ಲಿ ಸ್ಪಷ್ಟಪಡಿಸಿದೆ. ಅದನ್ನು ಏತಕ್ಕಾಗಿ ಎಕ್ಸೈಸ್‌ಗೆ ತಂದರೋ, ಇದನ್ನು ತರುವಾಗ ನಾನು ಈ ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಇದನ್ನು ಎಕ್ಸೈಸ್‌ಗೆ ಈ ರೀತಿಯ ಟ್ಯಾಕ್ಸ್‌ನ್ನು ಕಲೆಕ್ಟ್ ಮಾಡುವಂತಹದ್ದನ್ನು ಬಿಟ್ಟರೆ ಏನೆಲ್ಲಾ ಪರಿಣಾಮಗಳು ಆಗಿರಬಹುದು, ಇದರ ಬಗ್ಗೆ ಅಂಕಿಸಂಖ್ಯೆಗಳ ಪ್ರಕಾರ ಒಳ್ಳೆಯ ಪರಿಣಾಮಗಳು ಆಗಿದೆ ಎಂದು ಹೇಳಬಹುದು. ಆದರೆ ವಾಸ್ತವಿಕವಾಗಿ ಇದರ ಪರಿಣಾಮವಾಗಿ ರಾಜ್ಯಕ್ಕೆ ಅನುಕೂಲಕರವಾಗಿಲ್ಲ. ಎಂಬುದು ಸ್ಪಷ್ಟವಾಗಿದೆ. ಆದರೆ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಸ್ಪಷ್ಟಪಡಿಸಿರುವುದರಿಂದ ಎಕ್ಸೈಸ್‌ಗೆ ಇರುತ್ತದೆ ಎಂದು ಹೇಳಿದ್ದಾರೆ. ಇದು ಮತ್ತೆ ಏತಕ್ಕಾಗಿ ಅದರೊಳಗಿರುವ ಸ್ಥಿತಿ ಬಂದಿದೆ ಎಂಬುದನ್ನು ಬಿಡಿಸಿಹೇಳುವುದಕ್ಕೆ ಬಯಸುವುದಿಲ್ಲ. ಇದರ ಬಗ್ಗೆ ನಮ್ಮೆಲ್ಲರಿಗೂ ಗೊತ್ತಿದೆ. ಆದರೆ ಇದರ ಬಗ್ಗೆ ಅನೇಕರ ಅಭಿಪ್ರಾಯಗಳು ಇವತ್ತಿಗೂ ಇರುವಂತಹದ್ದು ಅದು ನಮ್ಮ ಕಮರ್ಷಿಯಲ್ ಟ್ಯಾಕ್ಸ್‌ನ ಅಡಿಯಲ್ಲಿ ಬಂದರೆ ಹೆಚ್ಚು ನಮ್ಮ ರಾಜ್ಯಕ್ಕೆ ಅನುಕೂಲವಾಗುತ್ತದೆ ಮತ್ತು ಆದಾಯ ಬರಬಹುದು ಎನ್ನುವಂತಹ ಅಭಿಪ್ರಾಯವಿದೆ. ಆ ಅಭಿಪ್ರಾಯವನ್ನು ಮತ್ತೊಮ್ಮೆ ಹಿಂದೆ ಈ ಒಂದು ಮಸೂದೆಯನ್ನು ತಂದಾಗಲೂ ಸಹ ನಾನು ಈ ಅಭಿಪ್ರಾಯವನ್ನು ನಾನು ಹೇಳಿದ್ದೆ. ಈಗಲೂ ಸಹ ಮತ್ತೊಮ್ಮೆ ಅಭಿಪ್ರಾಯವನ್ನು ಹೇಳುವುದಕ್ಕೆ ಬಯಸುತ್ತೇನೆ. ನಾವು ಸೆಕ್ಷನ್ 71 ರಿಂದ 72ರ ತನಕ ನಮ್ಮ ಆಕ್ಟ್‌ನಲ್ಲಿ ನೋಡಿದ್ದೇವೆ. ದಂಡಗಳು ಇದು ಈಗ ವಿಪರೀತವಾಗಿದೆ ಎಂದು ಹೇಳಿದರೆ ತಪ್ಪಿಲ್ಲ. ದಿನಕ್ಕೆ 200 ರೂಪಾಯಿಗಳ ದಂಡ ಹಾಕುವುದು, 5000 ರೂಪಾಯಿಗಳಿಂದ ಒಂದು ಲಕ್ಷ ರೂಪಾಯಿಗಳವರೆಗೆ ದಂಡ ಹಾಕಬಹುದು ಎನ್ನುವಂತಹ ಸೆಕ್ಷನ್‌ಗಳನ್ನು ನಾವು ನೋಡಿದರೆ ನಾವು ಯಾವ ಕಡೆಯಲ್ಲಿ ಹೋಗುತ್ತಿದ್ದೇವೆಂದು ಅರಿವು ಆಗುತ್ತದೆ. ಅದಕ್ಕಾಗಿ ನಾನು ಮೊದಲೇ ಹೇಳಿದೆ, ವ್ಯಾಪಾರಸ್ಥರು ಕಳ್ಳರು ಎನ್ನುವಂತಹ ದೃಷ್ಟಿಕೋನದಲ್ಲಿ ನೋಡಿದರೆ ಈ ರೀತಿಯ ದಂಡವನ್ನು ಹಾಕುವುದಕ್ಕೆ ಒಂದು ಕಾರಣ ಇರುತ್ತದೆ. ಅವರಿಂದ ತಪ್ಪುಗಳು ಆಗಿರಬಹುದು. ಅವರು ಯಾವುದೋ ಒಂದು ಸಂದರ್ಭದಲ್ಲಿ ಅಂದರೆ ಅಸೆಸ್‌ಮೆಂಟ್ ಮಾಡುವಾಗ ಅಥವಾ ಇನ್ಯಾವುದೋ ಸಂದರ್ಭದಲ್ಲಿ ತಪ್ಪುಗಳು ಆಗಿರಬಹುದು. ಆದರೆ ತಪ್ಪುಗಳಿಗೆ ಶಿಕ್ಷೆಯನ್ನು ವಿಪರೀತವಾಗಿ ವಿಧಿಸುವಂತಹದ್ದು ಇದು ಅಮಾನವೀಯವಾಗುತ್ತದೆ. ಹಾಗಾಗಿ ಈ ಸೆಕ್ಷನ್‌ನಲ್ಲಿ ಸಾಕಷ್ಟು ಅಂದರೆ 200 ರೂಪಾಯಿ, 5000 ರೂಪಾಯಿ, ಲಕ್ಷಗಟ್ಟಲೆ

ರೂಪಾಯಿಗಳು ದಂಡ ಹಾಕುವುದಕ್ಕೆ ಸರ್ಕಾರ ಏನು ತನ್ನ ವಿಧೇಯಕದಲ್ಲಿ ಸೂಚನೆಯನ್ನು ತಂದಿದೆ, ಇದನ್ನು ಕಡಿಮೆಗೊಳಿಸಬೇಕು, ಕೆಲವು ಹಂತದಲ್ಲಿ ಇದು ರೂಲ್ಸ್ ಮತ್ತು ಆ್ಯಕ್ಟ್‌ನಲ್ಲಿ ಬರುವುದರಿಂದಾಗಿ ಅಧಿಕಾರಿಗಳಿಗೆ ಯಾವುದೇ ರೀತಿಯಾದಂತಹ ಪವರ್ಸ್ ಡಿಸ್ಕಿಪ್ಲಿನರಿ ಪವರ್ಸ್ ಇರುವುದಿಲ್ಲ. ಅನೇಕ ಸಂದರ್ಭಗಳಲ್ಲಿ ತಿದ್ದಿಕೊಳ್ಳುವುದಕ್ಕೆ, ಮಾಡಿರುವಂತಹ ತಪ್ಪುಗಳನ್ನು ಮತ್ತೆಮತ್ತೆ ಮಾಡಿದರೆ ಅದಕ್ಕೆ ತಕ್ಕಂತಹ ಶಿಕ್ಷೆಗಳನ್ನು ಮತ್ತು ಹೆಚ್ಚು ಹೆಚ್ಚು ಶಿಕ್ಷೆಗಳನ್ನು ಕೊಡಬೇಕಾದಂತಹ ವ್ಯವಸ್ಥೆಗಳು ಇರಲೇಬೇಕಾಗುತ್ತದೆ. ಆದರೆ ಕೆಲವೊಮ್ಮೆ ಅದು ತಿಳಿಯದೆ ಆಗಿರುವಂತಹ ತಪ್ಪುಗಳು, ಅಥವಾ ಉದ್ದೇಶಪೂರಿತವಾದಂತಹ ಆದರೂ ಒಮ್ಮೆ ಆಗಿರುವಂತಹ ತಪ್ಪುಗಳನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶಗಳನ್ನು ಸ್ಥಳೀಯ ಮಟ್ಟದಲ್ಲಿ ಕೊಡಬೇಕಾದಂತಹ ಅಗತ್ಯತೆ ಇದೆ. ಹಾಗಾಗಿ ಫೆನಾಲ್ಟಿ ಕ್ಲಾಸ್ ಏನಿದೆ, ಅದು ಸೆಕ್ಷನ್ 72 ರಿಂದ 82ರ ಇದು ನಿಶ್ಚಿತವಾಗಿ ವ್ಯಾಪಾರಸ್ಥರಿಗೆ ದೊಡ್ಡಪ್ರಮಾಣದಲ್ಲಿ ಕಿರುಕುಳವನ್ನು ಕೊಡುತ್ತದೆ. ಇದರಿಂದಾಗಿ ದೊಡ್ಡ ಪ್ರಮಾಣದಲ್ಲಿ ಹೆರಾಸ್‌ಮೆಂಟ್ ಆಗುವುದಿದೆ. ಹೀಗಾಗಿ ಹೆರಾಸ್‌ಮೆಂಟ್ ತಪ್ಪಬೇಕೆಂದರೆ, ಇಲ್ಲಿ ನಾವು ಆ್ಯಕ್ಟ್‌ನಲ್ಲಿ ತರುತ್ತಿರುವಂತಹ ಅನೇಕ ರೀತಿಯಾದಂತಹ ಫೆನಾಲ್ಟಿ ಕ್ಲಾಸ್‌ಗಳು ಏನಿವೆ, ಇದರೊಳಗೆ ಸಡಿಲತೆ ಬೇಕಾಗುತ್ತದೆ. ಇದರ ಬಗ್ಗೆ ನಾನು ಹೇಳಿದ ತಕ್ಷಣ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇ ಬೇಕು ಮತ್ತೆ ಮತ್ತೆ ಹೆಚ್ಚು ಹೆಚ್ಚು ತಪ್ಪು ಮಾಡಿದವರಿಗೆ ಹೆಚ್ಚೆಚ್ಚು ಅಂದರೆ ಕಠಿಣಶಿಕ್ಷೆ ಆಗಲೇಬೇಕು. ಆದರೆ ಒಮ್ಮೆ ತಿಳಿಯದೇ ಮಾಡಿದಂತಹ ತಪ್ಪಿಗೆ, ಅಥವಾ ಯಾವುದೇ ತಪ್ಪುಗಳಿರಲಿ, ಒಮ್ಮೆ ಮಾಡಿದಂತಹ ತಪ್ಪುಗಳಿಗೆ ಕಠಿಣವಾದಂತಹ ಶಿಕ್ಷೆಗಳಾಗುವುದು ಅಥವಾ ಅಮಾನವೀಯವಾದ ರೀತಿಯಲ್ಲಿ ಆಗುವಂತಹ ಶಿಕ್ಷೆಗಳು ಸರಿಯಲ್ಲ. ಹಾಗಾಗಿ ಸೆಕ್ಷನ್ 71 ರಿಂದ 82 ರ ತನಕ ಇರುವಂತಹ ಎಲ್ಲಾ ಕ್ಲಾಸ್‌ಗಳನ್ನು ವಿವರಿಸಿ ಹೇಳುವುದಕ್ಕೆ ಬಯಸುವುದಿಲ್ಲ. ಇದರೊಳಗಡೆ ಅನೇಕ ರೀತಿಯಾದಂತಹ ಫೆನಾಲ್ಟಿ ಕ್ಲಾಸ್‌ಗಳು ಏನಿವೆ, ಇದು ಹೆಚ್ಚಾಯಿತು ಎನ್ನುವುದರ ಜೊತೆಯಲ್ಲಿ ಇದರಿಂದಾಗಿ ಹೆರಾಸ್‌ಮೆಂಟಾಗುತ್ತದೆ ಎನ್ನುವಂತಹದ್ದು ಬಹಳ ಸ್ಪಷ್ಟವಾಗಿ ಇವತ್ತು ಜನತೆಗೆ ಅನ್ನಿಸುತ್ತಿದೆ. ನಮಗೂ ಸಹ ಆ ರೀತಿಯಾದಂತಹ ಸಂಶಯ ಮೂಡಿರುವುದರಿಂದ ಇದರ ಬಗ್ಗೆ ಸರ್ಕಾರ ನಿಶ್ಚಿತವಾಗಿ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು. ಆ ಒಂದು ಫೆನಾಲ್ಟಿ ಕ್ಲಾಸ್‌ನಲ್ಲಿ ಸಾಕಷ್ಟು ಸಡಿಲತೆಯನ್ನು ತರಬೇಕೆಂದು ಹೇಳುತ್ತೇನೆ. ಸೆಕ್ಷನ್-20 ರಲ್ಲಿ ಇನ್ನೊಂದು ಗೊಂದಲವಿದೆ. ಸೆಕ್ಷನ್-20 ರೊಳಗಡೆ ಈಗ ನಾವು 100 ಪರ್ಸೆಂಟ್ ಎಕ್ಸ್‌ಪೋರ್ಟ್ ಓದರಿಯೆಂಟೆಡ್ ಯೂನಿಟ್ಸ್ ಯಾವುದು ಇದೆಯೋ ಅದಕ್ಕೆ ನಾವು ನಮ್ಮ ಸಂಪೂರ್ಣವಾದಂತಹ ಟ್ಯಾಕ್ಸ್‌ನ್ನು ಖರೀದಿಯ ಮೇಲೆ ವಿನಾಯಿತಿಯನ್ನು ಕೊಡುತ್ತಿದ್ದೇವೆ. ಆದರೆ ಈ ವ್ಯವಸ್ಥೆ ಬರುವುದರಿಂದಾಗಿ ಏನಾಗುತ್ತದೆಂದರೆ ಅವರು ಖರೀದಿಯ ಮೇಲೆ ಟ್ಯಾಕ್ಸ್‌ನ್ನು ರದ್ದು ಮಾಡಿರುವುದರಿಂದ ಇಲಾಖೆಯಿಂದ ಮರು ಟ್ಯಾಕ್ಸ್‌ನ್ನು ಕೊಡಬೇಕಾಗುತ್ತದೆ ಮತ್ತು ಮರು ಪಾವತಿಗಾಗಿ ಅಲ್ಲಿ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಸರ್ಕಾರಕ್ಕೆ ಒಮ್ಮೆ ದುಡ್ಡು ಬಂದರೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಈ ವ್ಯವಸ್ಥೆಯಲ್ಲಿ ಎಷ್ಟು ಕಷ್ಟವಾಗುತ್ತದೆಂದು ನಮಗೆ ಗೊತ್ತಿದೆ. ಹಾಗಾಗಿ ಮೊದಲು ಇದ್ದಂತೆಯೇ ಖರೀದಿಯ ಮೇಲೆ ವಿನಾಯಿತಿಯನ್ನು ಕೊಡುವುದಕ್ಕೆ ಬೇಕಾಗಿರುವಂತಹ ನೀತಿಯಲ್ಲಿಯೇ ಸರ್ಕಾರ ಯೋಚಿಸುವಂತೆ ಆಗಬೇಕು. ಈಗ ಸರ್ಕಾರದಿಂದ ಮರು ಮತ್ತು ವಾಪಸ್ಸು ತೆಗೆದುಕೊಳ್ಳುವಂತಹ ಹಣ 100 ಪರ್ಸೆಂಟ್ ಎಕ್ಸ್‌ಪೋರ್ಟ್ ಓರಿಯೆಂಟೆಡ್ ಯೂನಿಟ್ಸ್‌ಗಳಿರುವಂಥದಕ್ಕೆ ಎನಕರೇಜಮೆಂಟ್ ಬದಲಿಗೆ

ಇದು ಡಿಸ್‌ಕರೇಜ್‌ಮೆಂಟಾಗಬಹುದು. ಅವರುಗಳು ನಿರಾಶೆಗೊಳ್ಳಬಹುದು ಮತ್ತು ಸರ್ಕಾರ ಈ ವ್ಯವಸ್ಥೆಯಿಂದ ಹಣ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗದೆ ಅನೇಕರು ಇಂತಹ ಯೂನಿಟ್‌ಗಳನ್ನು ಕ್ಲೋಸ್ ಮಾಡಿ ಬೇರೆಯಾವುದಾದರೂ ರೀತಿಯಲ್ಲಿ ಹೆಸರನ್ನು ಇಟ್ಟುಕೊಂಡು ಇನ್ನೇನಾದರೂ ಮಾಡುವುದಕ್ಕೆ ಅವರು ಮುಂದಾಗುವಂತಹ ಸಂದರ್ಭಗಳು ಇವೆ. ಹಾಗಾಗಿ 100 ಪರ್ಸೆಂಟ್ ಎಕ್ಸ್‌ಪೋರ್ಟ್ ಓರಿಯೆಂಟೆಡ್ ಒಂದು ಯೂನಿಟ್ಸ್‌ಗಳಿಗೆ ಈ ರೀತಿಯಾದಂತಹ ಒಂದು ಸರಳತೆಯನ್ನು ತರುವುದಕ್ಕೆ ಅವರು ಖರೀದಿಯ ಮೇಲೆ ವಿನಾಯಿತಿಯನ್ನು ಕೊಡುವಂತಹದ್ದು ಏನಿದೆ, ಅದನ್ನು ಮುಂದುವರಿಸಬೇಕೆಂದು ಹೇಳುತ್ತೇನೆ. ಇನ್ನು ಅನೇಕ ಸಂಗತಿಗಳನ್ನು ನಾವು ಈ ಸಂದರ್ಭದಲ್ಲಿ ಪ್ರಸ್ತಾಪಿಸಬಹುದಾಗಿದ್ದರೂ ಸಹಿತ ನಮಗೆ ಖಾದಿ ಮತ್ತು ಖಾದಿ ಉತ್ಪನ್ನಗಳನ್ನು ವ್ಯಾಟ್‌ನಿಂದ ಹೊರಗಿಡಬೇಕಾಗಿದೆ. ನಾನು ಆಗಲೇ ಹೇಳಿದಂತೆ ಮಂಗಳಸೂತ್ರದಿಂದ ಹಿಡಿದು ನಮ್ಮ ಹಿಟ್ಟು, ಅಕ್ಕಿ ಗೋಧಿ, ಬ್ರೆಡ್ ಇತ್ಯಾದಿಗಳನ್ನೆಲ್ಲಾ 4 ಪರ್ಸೆಂಟ್‌ಗೆ ಸೇರಿಸಿರುವುದು ತಪ್ಪು ಅದನ್ನು ತೆಗೆಯಬೇಕಾಗಿದೆ ಎಂದು ಹೇಳುತ್ತಾ ನಾನು ಈ ಮತ್ತೊಮ್ಮೆ ಸರ್ಕಾರಕ್ಕೆ ಹೇಳುವುದು ಏನೆಂದರೆ, ಏಕೋ ಸರ್ಕಾರ ಇನ್ನು ವಿಳಂಬವಾದಂತಹ ಧೋರಣೆಯನ್ನು ಅನುಸರಿಸುತ್ತಿದೆ. ಈಗ 24ನೇ ತಾರೀಖು ಇದನ್ನಾದರೂ ತಂದಿದ್ದೇವೆ. ಇದು ಇನ್ನೂ ರಾಷ್ಟ್ರಪತಿಗಳ ತನಕ ಹೋಗಿ ಬರಬೇಕಾಗಿದೆ. ಇದು ಏಪ್ರಿಲ್-1ನೇ ತಾರೀಖಿನಿಂದ ಜಾರಿಗೆ ಬರುತ್ತದೆಂದು ಹೇಳುತ್ತಿದ್ದೇವೆ. ನಾನು ಏಪ್ರಿಲ್ ತಿಂಗಳ ಅಸೆಸೆಮೆಂಟನ್ನು ಕೊಡಬೇಕಾಗುತ್ತದೆ. ಏಪ್ರಿಲ್ ತಿಂಗಳೊಳಗೆ ಈ ಅಸೆಸ್‌ಮೆಂಟ್‌ನ್ನು ಕೊಡುವುದರೊಳಗಾಗಿ ಇವೆಲ್ಲವು ಬಂದಿಲ್ಲವೆಂದರೆ, ತೊಂದರೆಯಾಗುತ್ತದೆ. ಈಗ ನಮ್ಮ ವ್ಯವಸ್ಥೆ ಎಷ್ಟಾಗಿದೆ ಎಂದರೆ, ಅವರಿಗೆ ವ್ಯಾಟ್ ನಂಬರ್ ಮತ್ತು ರಿಜಿಸ್ಟ್ರೇಷನ್ ನಂಬರ್‌ಗಳನ್ನು ಕೊಟ್ಟಿರುವುದಿಲ್ಲ. ಕೆಎಸ್‌ಟಿ ಮತ್ತು ಸಿಎಸ್‌ಟಿ ನಂಬರ್‌ಗಳು ಏನಿದೆಯಲ್ಲಾ, ಅವರಿಗೆ ಇನ್ನೂ ನಾವು ವ್ಯಾಟ್ ರಿಜಿಸ್ಟ್ರೇಷನ್ ನಂಬರ್‌ಗಳನ್ನು ಕೊಟ್ಟಿರುವುದಿಲ್ಲ. ನಾವು ಲಕ್ಷಾಂತರ ಜನಕ್ಕೆ, ನಾನು ಆ ರಿಜಿಸ್ಟ್ರೇಷನ್ ನಂಬರುಗಳನ್ನು ಕೊಡದೆ ನಾವು ಈವತ್ತು 24ನೇ ತಾರೀಖು ಈ ಬಿಲ್ಲನ್ನು ತರುತ್ತಿದ್ದೇವೆ. ಈ ವ್ಯಾಟ್ ಪದ್ಧತಿಯು ಏಪ್ರಿಲ್ 1ನೇ ತಾರೀಖಿನಿಂದ ಜಾರಿಗೆ ಬರುತ್ತದೆಂದು ಹೇಳುತ್ತಿದ್ದೇವೆ. ಅವರಿಗೆ ನಾವು ಇನ್ನು ರಿಜಿಸ್ಟ್ರೇಷನ್ ನಂಬರನ್ನು ಕೊಡದೆ ಅವರಿಗೆ ಯಾವ ರೀತಿಯಾಗಿ ರಸೀತಿಯನ್ನು ಪ್ರಿಂಟ್ ಮಾಡಿಕೊಳ್ಳಬೇಕೆಂದೇ ಗೊತ್ತಿಲ್ಲ. ಏಕೆಂದರೆ ಈ ಆ್ಯಕ್ಟ್ ಪಾಸಾದ ಮೇಲೆ ನಾವು ಅಲ್ಲಿ ರಸೀತಿಯನ್ನು ಪ್ರಿಂಟ್ ಮಾಡಿಕೊಳ್ಳಿ ಎಂದು ಅಧಿಕಾರಿಗಳು ಹೇಳಿದ್ದಾರೆ. ಏಪ್ರಿಲ್ ತಿಂಗಳಿನಲ್ಲಿ ಇದಕ್ಕೆ ಅನ್ವಯವಾಗುವಂತೆ ಅವಕಾಶವನ್ನು ಮಾಡಿಕೊಟ್ಟರೂ, ಆದರೆ ಅವರಿಗೆ ದಂಡವನ್ನು ಹಾಕುವುದಾಗಲಿ, ಅದನ್ನು ಸರಿಪಡಿಸಿಕೊಳ್ಳುವುದಕ್ಕೆ ಇನ್ನೊಂದು ಆರು ತಿಂಗಳಾದರೂ ಅಥವಾ ಒಂದು ವರ್ಷವಾದರೂ ಅವಕಾಶವನ್ನು ಮಾಡಿಕೊಡಬೇಕು. ಅನೇಕ ಪೆನಾಲ್ಟಿ ಕ್ಲಾಸ್‌ಗಳು ಇರಲಿ, ಬೇರೆ ಬೇರೆ ರೀತಿಯಲ್ಲಿ ಅಧಿಕಾರಿಗಳು ಅವರಿಗೆ ಸಹಾಯಕಾರಿಯಾದಂತಹ ರೀತಿಯಲ್ಲಿ ವರ್ತಿಸುವುದಕ್ಕೆ ಸರ್ಕಾರದಿಂದ ಒಂದು ಸೂಕ್ತವಾದಂತಹ ನಿರ್ದೇಶನವನ್ನು ಕೊಡಿಸಬೇಕು. ಇಲ್ಲವೆಂದರೆ ಈಗ ಹೊಸ ವ್ಯವಸ್ಥೆಗಳು ಬರುತ್ತಿವೆ, ಈ ಒಂದು ಹೊಸ ವ್ಯವಸ್ಥೆಗೆ ಹೊಂದಿಕೊಳ್ಳುವಾಗ ಅಲ್ಲಿ ಇಲ್ಲಿ ಲೋಪದೋಷಗಳು ಆಗುವುದು ಸಹಜವಾಗಿದೆ. ಈ ರೀತಿಯಾಗಿರುವ ಲೋಪದೋಷಗಳನ್ನು ಕೆಲವು ಅಧಿಕಾರಿಗಳು ನೋಡುವುದಿಲ್ಲ. ಅವರು ಕಾನೂನು ಪುಸ್ತಕಗಳಲ್ಲಿ ಹೀಗೆ ಇದೆ, ಹಾಗಾಗಿ ನಾವು ಹೀಗೆಯೇ ಮಾಡುತ್ತೇವೆಂದು ಹೇಳಿ ಅವರು ಮುಂದುವರಿಯುತ್ತಾರೆ. ಆದರೆ ಹಾಗೇ ಆಗದೇ ಇದರೊಳಗಡೆ

ಅವರಿಗೆ ಇನ್ನು ಕಾಲಾವಕಾಶವನ್ನು ಕೊಟ್ಟು ಅವರು ಇದನ್ನು ಸರಿಪಡಿಸಿಕೊಳ್ಳುವುದಕ್ಕೆ ಅವರುಗಳು ವ್ಯವಸ್ಥೆಗೆ ಪೂರಕವಾಗಿ ಸ್ಪಂದಿಸುವಂಥ ರೀತಿಯಲ್ಲಿ ಇದನ್ನು ನಾವು ತರಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ನನಗೆ ಏನು ಅನ್ನಿಸುತ್ತದೆಂದರೆ, 3,6 ತಿಂಗಳು ಮತ್ತು ಒಂದು ವರ್ಷದ ಹಿಂದೆ ಇದನ್ನು ಏತಕ್ಕಾಗಿ ತಂದಿಲ್ಲವೆಂದು ಅನ್ನಿಸುತ್ತದೆಂದರೆ, ಮೊನ್ನೆ ಕೇಂದ್ರ ಸರ್ಕಾರದ ಇದರ ಬಗ್ಗೆ ಹೇಳಿದೆ, ಮೊದಲನೆಯ ವರ್ಷದಲ್ಲಿ 7600 ಕೋಟಿ ರೂಪಾಯಿಗಳು ನಾವು ಟ್ಯಾಕ್ಸ್‌ನ್ನು ಕಲೆಕ್ಟ್ ಮಾಡುವಂತದ್ದು ಇದ್ದರೆ ಈಗ ಅದರೊಳಗಡೆ ಕಡಿಮೆಯಾದರೆ 100 ಪರ್ಸೆಂಟ್ ಹಣವನ್ನು ತುಂಬಿಕೊಡುತ್ತೇವೆಂದು ಕೇಂದ್ರ ಸರ್ಕಾರ ಹೇಳಿದೆ. ಹಾಗಾಗಿಯೇ ಸರ್ಕಾರಕ್ಕೆ ಆಸಕ್ತಿ ಬಂತು, ಪ್ರಾಮಾಣಿಕವಾಗಿ ಈ ವ್ಯಾಟ್ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಅದನ್ನು ಯಶಸ್ವಿಗೊಳಿಸಬೇಕೆನ್ನುವಂತಹ ಹಿನ್ನೆಲೆಯಲ್ಲಿ ಈ ವ್ಯವಸ್ಥೆಯನ್ನು ಜಾರಿಗೊಳಿಸುವುದಕ್ಕೆ ಮುಂದಾಗಲಿಲ್ಲವೆನ್ನುವಂತಹ ಸಂಶಯವು ಬರುವುದಕ್ಕೆ ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ವ್ಯಾಪಾರಸ್ಥರಿಗೆ ಈ ರೀತಿಯಾಗಿ ಅವರಿಗೆ ಸಹಕಾರವಾಗುವಂತಹ ರೀತಿಯಲ್ಲಿ ಅಧಿಕಾರಿಗಳಿಂದ ಸೂಕ್ತವಾದಂತಹ ನಿರ್ದೇಶನವನ್ನು ಕಳುಹಿಸಿ ಈ ವ್ಯವಸ್ಥೆಯು ಹೊಂದಾಣಿಕೆಯಾಗುವ ತನಕ ಸಾಕಷ್ಟು ಸೆಕ್ಷನ್‌ಗಳಲ್ಲಿ ಸಡಿಲತೆಯನ್ನು ತೋರಿಸಿ ಅವರಿಗೆ ಅನುಕೂಲಕರವಾಗುವಂತಹ ರೀತಿಯಲ್ಲಿ ಮಾಡಬೇಕು. ನಾನು ಈಗ ಹೇಳಿರುವಂತಹ ಕೆಲವು ತಿದ್ದುಪಡಿಗಳ ಬಗ್ಗೆ ಸ್ಪಷ್ಟತೆಯೊಂದಿಗೆ ಸರ್ಕಾರವು ಬರಬೇಕೆನ್ನುವಂತಹ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :- ಸನ್ಮಾನ್ಯ ಛೇರ್ಮನ್‌ರವರೆ, ಇವತ್ತು ಕರ್ನಾಟಕದಲ್ಲಿ ಮೊದಲನೆಯ ಬಾರಿಗೆ ಮಾರಾಟ ತೆರಿಗೆ ಇದ್ದದ್ದನ್ನು ಅದನ್ನು ಬದಲಾಯಿಸಿ ಏನೂ ವ್ಯಾಲ್ಯೂ ಆಡೆಡ್ ಟ್ಯಾಕ್ಸ್ (ವ್ಯಾಟ್) ಎಂದು ಹೇಳಿ ಮೌಲ್ಯವರ್ಧಿತ ತೆರಿಗೆಯನ್ನು ತಂದಿರತಕ್ಕಂತಹ ಸುಧಾರಣಾ ಕ್ರಮವಾಗಿದೆ. ಈಗಾಗಲೇ ಇದರ ಬಗ್ಗೆ ಮಾನ್ಯ ಸಚಿವರು ತಿಳಿಸಿದರು ಮತ್ತು ಇದರ ಬಗ್ಗೆ ನಾವೂ ಸಹ ತಿಳಿದುಕೊಂಡಿದ್ದೇವೆ. ಈ ಒಂದು ಪದ್ಧತಿಯನ್ನು ಫ್ರಾನ್ಸ್‌ನಲ್ಲಿ ತಂದಂಥದ್ದು ಸುಮಾರು 130 ರಾಷ್ಟ್ರಗಳು ಅಂದರೆ ಪ್ರಪಂಚದಲ್ಲಿರತಕ್ಕಂತಹ ಇದನ್ನು ಅಳವಡಿಸಿಕೊಂಡು ಬಹಳ ಒಳ್ಳೆಯ ಪದ್ಧತಿ ಎಂದು ಅವರೂ ಸಹ ತಿಳಿಸಿದರು ಮತ್ತು ಇದನ್ನು ಎಲ್ಲಾ ಕೇಂದ್ರಸರ್ಕಾರಗಳು ಅಲ್ಲಿನ ಆರ್ಥಿಕ ಮಂತ್ರಿಗಳು, ಎಲ್ಲಾ ರಾಜ್ಯದ ಅರ್ಥ ಸಚಿವರನ್ನು ಹಾಗೂ ಮುಖ್ಯಮಂತ್ರಿಗಳನ್ನು ಕರೆದು ಇದನ್ನು ಮೊದಲನೆ ಬಾರಿಗೆ ಎಲ್ಲಾ ರಾಜ್ಯಗಳು ಒಪ್ಪಿಗೆಯನ್ನು ಸೂಚಿಸಿ ಮಾಡಬೇಕೆಂದು ಹೇಳಿ ಇದನ್ನು ಮಾಡುವಂತಹದ್ದಕ್ಕೆ ಈಗಾಗಲೇ ಇದರ ಬಗ್ಗೆ ಚರ್ಚೆ ನಡೆದು ಇದರ ಬಗ್ಗೆ ಇವತ್ತು ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಈಗಾಗಲೇ ಅವರು ಅರ್ಥಪತ್ರವನ್ನು (ಬಜೆಟ್)ನ್ನು ಮಂಡಿಸಿರುವಾಗಲೇ ಸಾಕಷ್ಟು ಇಲ್ಲಿ 4 ಪರ್ಸೆಂಟ್ ಟ್ಯಾಕ್ಸ್‌ನ್ನು ಹಾಕುವಂತಹ ಪದಾರ್ಥಗಳೆಷ್ಟು ಮತ್ತು 12 ಪರ್ಸೆಂಟ್ ಟ್ಯಾಕ್ಸ್ ಹಾಕುವಂತಹ ಪದಾರ್ಥಗಳೆಷ್ಟು ಮತ್ತು ಇದರಿಂದ ಎಕ್ಸೆಮ್‌ಷನ್, ಅಂದರೆ ಇದರಿಂದ ಹೊರಗಿಡುವಂತಹ ಪದಾರ್ಥಗಳೇನು ಎನ್ನುವುದರ ಬಗ್ಗೆ ಸಾಕಷ್ಟು ತಿಳಿಸಿದ್ದಾರೆ. ಆದರೆ ಈಗಾಗಲೇ ಇದರ ಬಗ್ಗೆ ಮಾನ್ಯ ಸದಸ್ಯರಾದಂತಹ ಶ್ರೀ ಕೆ. ವಿಶ್ವೇಶ್ವರ ಹೆಗಡೆಯವರು ಮತ್ತು ನಮಗೆಲ್ಲಾ ಆತಂಕವೇನೆಂದರೆ, ಇದು ಎಷ್ಟು ಮಾತ್ರ ಈ ಮಾರಾಟ ತೆರಿಗೆಯನ್ನು ಬದಲಾವಣೆಯ ರೂಪದಲ್ಲಿ ಈ ಮೌಲ್ಯವರ್ಧಿತ ತೆರಿಗೆಯನ್ನು ತಂದಾಗ ಇದು ಕನ್ಸೂಮರ್ ಮೇಲೆ, ಯಾರು ಅದನ್ನು ಕೊಂಡುಕೊಳ್ಳುತ್ತಾರೆ. ಆ ಮನುಷ್ಯನಿಗೆ ಅದು ಹೊರೆಯಾಗುವಂತಹ ಕಾರ್ಯ ಇದು ಆಗುವಂಥದ್ದು ಆಗಿದೆ. ಅಂದರೆ ಟ್ರೇಡರ್‌ಗೆ ಯಾವಾಗಲೂ

ಏನೂ ತೊಂದರೆಗಳಾಗುವುದಿಲ್ಲ. It will pass on to the consumer. ಕನ್ಸೂಮರ್‌ಗೆ ಹೆಚ್ಚು ಹೊರೆಯಾದಾಗ ಇಲ್ಲಿನ ಎಲ್ಲಾ ಜನರು ಅದಕ್ಕೆ ಹೊಂದಿಕೊಳ್ಳುವಂತಹ ಒಂದು ವ್ಯವಸ್ಥೆಯಲ್ಲಿ ಇದನ್ನು ತರಾತುರಿಯಲ್ಲಿ ತಂದು ಜನರಿಗೆ ಅರ್ಥವಾಗದಂತಹ ರೀತಿಯಲ್ಲಿ ಹೇಳುವುದು ಮತ್ತು ಅವರನ್ನು ಎಜುಕೇಟ್ ಮಾಡದೆ ಇದನ್ನು ಜಾರಿಗೆ ತರುವುದು ಸರಿಯೇ? ನಮ್ಮ ರಾಜ್ಯದಲ್ಲಿ ಮೇಜರ್ ರೆವಿನ್ಯೂ ಇವತ್ತು ನಮ್ಮ ಮಾರಾಟ ತೆರಿಗೆಯಿಂದ ಬರುತ್ತಿದೆ. ಸುಮಾರು 8000 ಸಾವಿರ ಕೋಟಿ ರೂಪಾಯಿಗಳು ಸಂಗ್ರಹವಾಗುತ್ತದೆ ಎಂದು ಸುಮಾರು ಅಂದಾಜನ್ನು ಮಾನ್ಯ ಮುಖ್ಯಮಂತ್ರಿಗಳು ತೋರಿಸಿದ್ದಾರೆ. ಮತ್ತು ಎಕ್ಸೈಸ್‌ನಲ್ಲಿ ಬರುವಂತಹ ಹಣ ಕೋಡ್ ಟ್ರಾನ್ಸ್ ಪೋರ್ಟ್‌ನಲ್ಲಿ ಬರುವಂತಹ ಹಣ, ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಬರುವಂತಹದ್ದು, ಏನು ನಮಗೆ ಮೇಜರ್ ರೆವಿನ್ಯೂ ಬರುವುದನ್ನು ಸುಮಾರು 70 ಭಾಗದಷ್ಟು ಈ ಮಾರಾಟ ತೆರಿಗೆಯಲ್ಲಿ ಬರುತ್ತದೆ ಎಂಬುದನ್ನು ನಾವು ಇವತ್ತು ಕಾಣುತ್ತಿದ್ದೇವೆ. ಎಲ್ಲಾ ರಾಜ್ಯಗಳು ಇದನ್ನು ಅಳವಡಿಸಕೊಂಡೆ ಎಂದು ಮಾನ್ಯ ಸಚಿವರು ತಿಳಿಸಿದರು. ಇದನ್ನು ಎಷ್ಟು ರಾಜ್ಯಗಳು ಅಳವಡಿಸಿಕೊಂಡಿದೆ? ಹೀಗೆ ಅಳವಡಿಸಿಕೊಂಡಿರತಕ್ಕಂತಹ ರೆವಿನ್ಯೂನಲ್ಲಿ ನಮಗೆ ಬರುವುದೆಷ್ಟು? ನಮಗೆ ಕಡಿಮೆಯಾಗುವುದೆಷ್ಟು? ಇವತ್ತು ಇದರ ಬಗ್ಗೆ ತಾವು ಹೇಳಿದ್ದೀರಿ, ಸುಮಾರು 500 ರಿಂದ 1000 ಕೋಟಿರೂಪಾಯಿಗಳು, ಇದರಿಂದಾಗಿ ನಮಗೆ ಎಷ್ಟು ಕೋಟಿ ರೂಪಾಯಿಗಳು ತೆರಿಗೆ ಕಡಿಮೆಯಾಗುತ್ತದೆ. ಹೀಗೆ ಕಡಿಮೆಯಾಗುವಂತಹದ್ದನ್ನು ಕೇಂದ್ರಸರ್ಕಾರ ನಮಗೆ ಅದನ್ನು ತುಂಬಿಕೊಡುತ್ತದೆಯೇ? ಇಡೀ ರಾಷ್ಟ್ರದಲ್ಲಿ ಇವತ್ತು ಇರತಕ್ಕಂತಹ ರಾಜ್ಯಗಳಲ್ಲಿ ಈ ಒಂದು ವಿ.ಎ.ಟಿ.....

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಹಾಗೂ ಸಣ್ಣ ನೀರಾವರಿ ಸಚಿವರು) :- ಮಾನ್ಯ ಛೇರ್ಮನ್‌ರವರೆ, ಇದರ ಬಗ್ಗೆ ನನಗೆ ನೆನಪು ಇದ್ದಹಾಗೆ, ಇಲ್ಲಿ ಅನೇಕ ಸಾರಿ ಇದರ ಬಗ್ಗೆ ಡಿಬೇಟ್‌ಗಳು ನಡೆದಾಗ ತಮ್ಮ ಸರ್ಕಾರವೂ ಕೂಡ ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿತ್ತು ಮತ್ತು ಹಿಂದೆ ಮಾನ್ಯ ಸಿದ್ದರಾಮಯ್ಯನವರು ಅನೇಕ ಸಾರಿಗೆ ಇದು ಒಳ್ಳೆಯ ಮತ್ತು ಉತ್ತಮವಾದಂತಹದ್ದು ಇದನ್ನು ನಾವು ಅಕ್ಸೆಪ್ಟ್ ಮಾಡಲೇಬೇಕಾಗುತ್ತದೆ. Inevitable ಎನ್ನತಕ್ಕಂತಹ ಮಾತು ಪ್ರಸ್ತಾಪವಾಗಿತ್ತು. ಬಹುಶಃ ಇವೆಲ್ಲಾ ಅರ್ಥಮಾಡಿಕೊಂಡೇ ಆ ಕಾಲದಲ್ಲಿ ಹೇಳಿರಬಹುದೆಂದು ನನ್ನದೊಂದು ಸಲಹೆ.

ಶ್ರೀ ಬಿ.ಎನ್. ಬಚ್ಚೇಗೌಡ :- ವ್ಯಾಟ್ ಬಗ್ಗೆ ಆರ್ಥಿಕ ವ್ಯವಸ್ಥೆಯನ್ನು ಸರಿಪಡಿಸುವ ಬಗ್ಗೆ ಕಾರ್ಯ ಇವತ್ತು ಬೇಕಾಗುತ್ತದೆ. ಇದೊಂದು ಹೊಸ ಪ್ರಯೋಗವಾಗಿದೆ. ಈ ರಾಷ್ಟ್ರದಲ್ಲಿ ಒಂದು ಹೊಸ ಪ್ರಯೋಗವನ್ನು ಮಾಡಿ, ನಿಮ್ಮ ಸರ್ಕಾರವಿದ್ದಾಗಲೇ ಇದನ್ನು ಸ್ವಾಗತ ಮಾಡಿದೆ ಎಂದು ಹೇಳಿದಿರಿ, ಇದರಲ್ಲಿ ಬೇರೆ ಬೇರೆ ಸ್ಲ್ಯಾಬ್‌ಗಳು ಏನಿವೆ, ದೇಶದಲ್ಲಿ ತೆರಿಗೆಯನ್ನು ವಸೂಲಿ ತೆರಿಗೆ ಪದ್ಧತಿಗಳು ಏನಿವೆ, ಪಕ್ಕದ ರಾಜ್ಯಗಳಿಗೆ ಹೋಲಿಸಿದಾಗ ಅಥವಾ ರಾಷ್ಟ್ರದಲ್ಲಿ ಟೋಟಲಿ ಮಾಡಿದಾಗ ತೆರಿಗೆ ಡೂಪ್ಲಿಕೇಷನ್ ಆಗಲೂ ಅಥವಾ ಸಿಂಗಲ್ ಟೈಮ್ ಟ್ಯಾಕ್ಸ್‌ನ್ನು ಕೊಡುವುದು ಇವೆಲ್ಲಾ ಏನೇನು ಪದ್ಧತಿಗಳನ್ನು, ಇದನ್ನು ಸರಿಪಡಿಸುವಂತಹ ಬಹಳ ಒಂದು ಒಳ್ಳೆಯ ವ್ಯವಸ್ಥೆ ಎಂದು ನಾವು ತಿಳಿದುಕೊಂಡಿದ್ದೆವು ಈಗ ತಾವು ತಂದಿರತಕ್ಕಂತಹ ಪದ್ಧತಿಗಳು ಏನಿದೆ, ಇದಕ್ಕೆ ನಾವು ಹೇಳುವುದೇನೆಂದರೆ ಮುಂದೆ ಇದರಲ್ಲಿ ಕೆಲವರಿಗೆ ವಿನಾಯಿತಿಗಳನ್ನು ಕೊಟ್ಟು ಹಾಗೆಯೇ ಉಳಿಸಿಕೊಂಡು ಕೆಲವರಿಗೆ ಮಾತ್ರ ಇದನ್ನು ಟ್ಯಾಕ್ಸ್ ಹಾಕುವಂತಹ

ವ್ಯವಸ್ಥೆಗಳಾಗಬಾರದು. ಇವತ್ತು ಸಕ್ಕರೆ ವಲಯದ ಬಗ್ಗೆ ಅದು ಬೇರೆ ಕಡೆ ಇದೆಯೆಂದು ತಾವು ಹೇಳಿದಿರಿ. ಇವತ್ತು ಲಿಕ್ಕರ್ಸ್ ಏನಿದೆ, ಇವತ್ತು ಐ.ಎಂ.ಎಫ್.ನಲ್ಲಿ ಇವೆಲ್ಲಾ ಏನಿದೆ ಅದನ್ನು ಬೇರೆ ಕಡೆಗೆ ಹೊರತುಪಡಿಸಿದ್ದೀರಿ, ಪೆಟ್ರೋಲ್ ಮತ್ತು ಡಿಸೇಲ್ ಏನಿದೆ, ಇದನ್ನು ಹೊರತುಪಡಿಸಿ ಬೇರೆ ಕಡೆಗೆ ಇಟ್ಟಿದ್ದೀರಿ. ಅನೇಕ ಇಂತಹದ್ದನ್ನು ಬೇರೆ ಕಡೆಗೆ ಇಟ್ಟು ವ್ಯಾಟ್‌ನ್ನು ಅಟ್ರ್ಯಾಕ್ಟ್ ಮಾಡದ ರೀತಿಯಲ್ಲಿ ಹೇಳಿಕೊಂಡು, ಕೆಲವು ಮಾತ್ರ ಈ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಹೇಳಿದ್ದೀರಿ. ಈ ಸ್ಲಾಬ್‌ಗಳು ಏನಿವೆ, 1-4-12-20 ಎಂದು ತಾವು ಏನು ಹೇಳಿದ್ದೀರಿ, ಇದನ್ನು ಯಾವುದಕ್ಕೆ ಅಳವಡಿಸಬೇಕೆಂದಾಗ ಇದರ ಬಗ್ಗೆ ತಾವು ಒಂದು ಉದಾಹರಣೆಯನ್ನು ಕೊಟ್ಟಿದ್ದೀರಿ, 5000 ರೂಪಾಯಿಗಳನ್ನು ಕೊಟ್ಟರೆ ಅದಕ್ಕೆ ಏನು ಟ್ಯಾಕ್ಸ್ ಆಗುತ್ತದೆ. ಟೋಟಲ್ ಕಾಸ್ಟ್ ಆಫ್ ದಿ ಮೆಟೀರಿಯಲ್ ಏನು? ಉತ್ಪಾದನೆಯ ಖರ್ಚು ಅದಕ್ಕೆ ಏನಾಗುತ್ತದೆ. ಅದನ್ನು ಟೋಟಲ್ ವ್ಯಾಲ್ಯುನಲ್ಲಿ ತೆಗೆದುಕೊಂಡು ಆ ವ್ಯಾಲ್ಯು ಮೇಲೆ 4 ಪರ್ಸೆಂಟ್ ಹಾಕಿದರೆ ಇಷ್ಟು ರೂಪಾಯಿಗಳಾಗುತ್ತದೆ. 5200 ಆಗುತ್ತದೆ ಮತ್ತೇ 200 ರೂಪಾಯಿಗಳು, 5400 ರೂಪಾಯಿಗಳಾಗುತ್ತದೆ. ಈ ವ್ಯಾಲ್ಯೂ ಅಡಿಷನ್ ಏನಿದೆ, ಇದನ್ನು ಅರ್ಥಮಾಡಿಕೊಂಡು ಸರಿಯಾದಂತಹ ರೀತಿಯಲ್ಲಿ ಬರುವಂತಹ ಕಾರ್ಯ ಆಗಬೇಕು.

5.50 ಪಿ.ಎಂ.

ಇವತ್ತು ನಾವು ಆರ್ಥಿಕ ವ್ಯವಸ್ಥೆಯಲ್ಲಿ ಕಷ್ಟದಲ್ಲಿದ್ದೇವೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಪದೇಪದೇ ಹೇಳಿದ್ದಾರೆ. ಇವತ್ತು ನಾವು ಕಷ್ಟದಲ್ಲಿರತಕ್ಕಂಥ ಪರಿಸ್ಥಿತಿಯಲ್ಲಿ ನಮಗೆ ಬರುವಂಥಾದ್ದು ಇನ್ನೂ ಕಡಿಮೆಯಾದಾಗ, ಕಳೆದ ಬಾರಿ ನಮಗೆ ಒಂದು ಸಾವಿರ ಕೋಟಿ ರೂ. ಕಡಿಮೆಯಾಯಿತು. ಕೇಂದ್ರದಿಂದ ಬರುವ ಐದುನೂರು ಕೋಟಿ ರೂಪಾಯಿ ಮತ್ತು ರಾಜ್ಯದಲ್ಲಿ ಐದು ನೂರು ಕೋಟಿ ರೂ ಕಡಿಮೆ ಆಯಿತು. ಅಲ್ಲಿ ಪ್ಲಾನ್‌ಸೈಜ್ ಕಟ್ ಮಾಡಿದರು ಮತ್ತು ಇಲ್ಲಿ ಪ್ಲಾನ್‌ಸೈಜ್ ಐದುನೂರು ಕೋಟಿ ರೂ ಕಟ್ ಮಾಡಿದರು. ಹಾಗೆಯೇ ಈ ವರ್ಷ ಮುಖ್ಯಮಂತ್ರಿಗಳು ಹೇಳುವಂಥಾದ್ದು 1700 ಕೋಟಿ ರೂ. ರೆವಿನ್ಯೂ ಕಡಿಮೆಯಾಗಲಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಬರುವಂಥ ಹಣದಲ್ಲಿ ನಮಗೆ ಕೊರತೆ ಕಂಡಿರುವಂಥಾದ್ದು 1700 ಕೋಟಿ ರೂ. ಇದೆ. 2001-02ರಲ್ಲಿ ಒಂದು ಸಾವಿರದಲ್ಲಿ ನಮ್ಮದೇ ಐದುನೂರು ಕೋಟಿ ರೂ. ಕಡಿಮೆ ಆದರೆ ನಮಗೆ ರೆವಿನ್ಯೂ ಬರುವಂಥಾದ್ದು ಬಹಳ ಮುಖ್ಯವಾಗಿ ಮಾರಾಟ ತೆರಿಗೆಯಿಂದ. ಮಾರಾಟ ತೆರಿಗೆ ಕಡಿಮೆಯಾದಾಗ ಇವತ್ತು ಸರ್ಕಾರವನ್ನು ನಡೆಸಿಕೊಂಡು ಹೋಗುವುದಕ್ಕೆ ಅಭಿವೃದ್ಧಿ ದಿಸೆಯಲ್ಲಿ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಇವತ್ತು ವ್ಯಾಟ್‌ಗೆ ಈಗಾಗಲೇ ಮುಖ್ಯಮಂತ್ರಿಗಳು, ಸರ್ಕಾರ ಒಪ್ಪಿಕೊಂಡು ಆಗಿದೆ. ಇದು ನಮ್ಮ ಸರ್ಕಾರ ಅಲ್ಲದೆ ಪಕ್ಕದ ರಾಜ್ಯಗಳಾದ ಮಹಾರಾಷ್ಟ್ರ ಇರಬಹುದು, ಕೇರಳ ಇರಬಹುದು ಆ ಕಡೆ ತಮಿಳುನಾಡು ಇರಬಹುದು ಅಥವಾ ಆಂಧ್ರ ಪ್ರದೇಶ ಇರಬಹುದು. Par with Goa ಇರಬಹುದು. ಎಲ್ಲರೂ ಪರಸ್ಪರ ಹೊಂದಿಕೊಂಡು ಇದನ್ನೇ ಅಳವಡಿಸಿಕೊಳ್ಳುವಂಥ ರೀತಿ ಆಗಬೇಕು. ಇಲ್ಲದಿದ್ದರೆ ಆಮೇಲೆ ಬೇರೆ ಬೇರೆ ಕಡೆಗೆ ಹೋಗಿ ಎಲ್ಲಿ ಕಡಿಮೆಗೆ ಸಿಗುತ್ತದೆ ಎಂದು ಅಲ್ಲಿಂದ ತರತಕ್ಕಂಥಾದ್ದು ಆಗಬಾರದು. ಇವತ್ತು ಆಕ್ಟ್ರಾಯ್ ವ್ಯವಸ್ಥೆ ಮಹಾರಾಷ್ಟ್ರದಲ್ಲಿದೆ. ನಮ್ಮ ರಾಜ್ಯದಲ್ಲಿ ಆ ಪದ್ಧತಿ ಇಲ್ಲ. ನಮ್ಮಲ್ಲಿ ಅದಕ್ಕೆ ಬೇರೆಯೇ ಆದ ವ್ಯವಸ್ಥೆ ಇದೆ. ಇವತ್ತು ನಮ್ಮ ಮುಖ್ಯಮಂತ್ರಿಗಳಾಗಬಹುದು, ಅಥವಾ ಕೇಂದ್ರ ಸರ್ಕಾರ ಆಗಬಹುದು. ಕಡ್ಡಾಯವಾಗಿ ಸರಿಯಾದ ಕಾರ್ಯಕ್ರಮಗಳನ್ನು ರೂಪಿಸುವ ವ್ಯವಸ್ಥೆ ಆಗಬೇಕು. ಈಗಿರುವಂಥ ಆರ್ಥಿಕ ವ್ಯವಸ್ಥೆಯಲ್ಲಿ

ಕೇಂದ್ರಸರ್ಕಾರ ಬಹಳ ಸೇಫ್ ಆಗಿದೆ ಬಹಳ ಚೆನ್ನಾಗಿದೆ ಎಂದು ನಾವು ಅಂದುಕೊಂಡಿಲ್ಲ. ಅವರು ಸಾಕಷ್ಟು ಸಾಲ ತಂದು ಸರ್ಕಾರ ನಡೆಸುವಂಥ ಪರಿಸ್ಥಿತಿಯನ್ನು ನಾವು ಕಾಣುತ್ತಾ ಇರುವಂಥಾದ್ದು ಇದೆ. ನಮ್ಮ ರಾಜ್ಯಸರ್ಕಾರಗಳದ್ದೂ ಕೂಡ ಇದೇ ಪರಿಸ್ಥಿತಿ ಇದೆ. ಬೇರೆ ಕಡೆಯಿಂದ ಇನ್‌ಸ್ಟಿಟ್ಯೂಶನಲ್ ಫೈನಾನ್ಸ್ ತಂದು ಆ ಮೂಲಕ ಸರ್ಕಾರವನ್ನು ನಡೆಸುವುದು ಆಗಿರುವಂಥಾದ್ದು ಇದೆ. ಆ ದೃಷ್ಟಿಯಿಂದ ಇವತ್ತು ಈ ಒಂದು ವ್ಯವಸ್ಥೆ ಈಗ ತಂದಿರತಕ್ಕಂಥ ಏನು ಮೌಲ್ಯವರ್ಧಿತ ತೆರಿಗೆ ಇದೆ, ಆ ತೆರಿಗೆಯನ್ನು ಕಟ್ಟುವವರು ಬಹಳಷ್ಟು ಜನ ಅವಿದ್ಯಾವಂತರು ಅದರ ಬಗ್ಗೆ ತಾವು ಹೇಳಿದ್ದೀರಿ. ಆ ಪನಿಷ್‌ಮೆಂಟ್ ಕ್ಲಾಸಸ್ ಏನಿದೆ ಇವು ಸಾಕಷ್ಟು ಜನರಿಗೆ ಅರ್ಥವಾಗುವುದಿಲ್ಲ. ಇವತ್ತು ಪದಾರ್ಥವನ್ನು ತೆಗೆದುಕೊಂಡು ಹೋಗಿದ್ದಕ್ಕೆ ಅವನು ರಸೀತಿಯನ್ನು ಇಡದೇ ಇದ್ದರೆ ಟ್ರೇಡರ್ಸ್ ಜೈಲಿಗೆ ಹೋಗುತ್ತಾರೆ ಮತ್ತು ಗ್ರಾಹಕರೂ ಕೂಡ ಜೈಲಿಗೆ ಹೋಗುತ್ತಾರೆ. ಇಬ್ಬರೂ ಜೈಲಿಗೆ ಹೋಗುವಂಥ ಈ ಶಿಕ್ಷಾರ್ಹ ಕ್ಲಾಸ್ ಬಗ್ಗೆ ತಾವು ಹೇಳಬೇಕು. ಈ ದೃಷ್ಟಿಯಿಂದ ಇದನ್ನು ಸಮಗ್ರವಾಗಿ ನೋಡಬೇಕಾಗುತ್ತದೆ. ಇವತ್ತು ಕೇಂದ್ರಸರ್ಕಾರ ಈ ಹಣವನ್ನು ಬರದಿರತಕ್ಕಂಥ ಅಥವಾ ಕಡಿಮೆ ಆಗತಕ್ಕಂಥ ರೀತಿಯಲ್ಲಿ ಇದನ್ನು ಇಂಟ್ರೋಡ್ಯೂಸ್ ಮಾಡಿರುವುದರಿಂದ ಪ್ರತಿವರ್ಷ ಏನು ವ್ಯತ್ಯಾಸ ಆಗುತ್ತದೆ, ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಆ ಹಣವನ್ನು ನಮಗೆ ಕೊಡುವಂಥ ಕಾರ್ಯಕ್ರಮ ಆಗಬೇಕು ಎಂದು ನಾನು ಹೇಳುತ್ತೇನೆ. ಆ ರೀತಿಯಲ್ಲಿ ಇದನ್ನು ಸಮಗ್ರವಾಗಿ ಇಲ್ಲಿ ಚರ್ಚೆಯಾಗಬೇಕಾಗಿತ್ತು. ಆದರೆ ಈ ರೀತಿ ಚರ್ಚೆಯಾಗಿಲ್ಲ. ಇದನ್ನು ಬರೇ ಬಿಲ್‌ರೂಪದಲ್ಲಿ ನಮ್ಮ ಮುಂದೆ ತಾವು ತಂದಿದ್ದೀರಿ. ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಅಥವಾ ಬೇರೆ ಸಮಿತಿಗೋ ತಾವು ಕೊಟ್ಟು ಆಮೇಲೆ ಸಾಕಷ್ಟು ಚರ್ಚೆಗಳಾಗಿ ಏನಾಗುತ್ತದೆ. ಏನಾಗುವುದಿಲ್ಲ ಎಂದು ನಮಗೆ ಸಾಕಷ್ಟು ತಿಳಿಸಿ ಆಮೇಲೆ ನಾವು ಈ ಬಗ್ಗೆ ನಮ್ಮ ಒಪ್ಪಿಗೆಯನ್ನು ಸೂಚಿಸಬೇಕಾಗಿತ್ತು. ಆದರೆ ಇದ್ದಕ್ಕಿದ್ದಹಾಗೆ ಇದನ್ನು ತಂದು.......

ಛೇರಮನ್ :- ತಾವು ಏನಾದರೂ ನಿರ್ದಿಷ್ಟವಾದ ತಿದ್ದುಪಡಿಯನ್ನು ಸೂಚಿಸುವ ಹಾಗಿದ್ದರ ಸೂಚಿಸಿ.

ಶ್ರೀ ಬಿ.ಎನ್. ಬಚ್ಚೇಗೌಡ :- ಅಂತಹ ನಿರ್ದಿಷ್ಟ ತಿದ್ದುಪಡಿ ಏನೂ ಇಲ್ಲ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಇದನ್ನು ತರಬೇಕು ಎಂದು ನಾವೇ ಹೇಳಿದ್ದೇವೆ. ಇದು ಉತ್ತಮವಾದ ವ್ಯವಸ್ಥೆಯೆಂದು ನಾವು ಹೇಳಿದ್ದೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಇದು ತಿದ್ದುಪಡಿಯಾಗಬೇಕು. ಆದರೆ ಇದರ ಬಗ್ಗೆ ಮೊದಲು ಚರ್ಚೆಯಾಗಬೇಕು. ಸೆಕ್ಷನ್ ಬೈ ಸೆಕ್ಷನ್ ಚರ್ಚೆಮಾಡಿಕೊಂಡು ಹೋದಾಗ ಏನು ಮಾಡಬಾರದು, ಏನು ಮಾಡಬೇಕು ಎಂದು ನಾವು ಹೇಳಬಹುದು. ಆದರೆ ಈಗ ಈ ತರಹ ಚರ್ಚೆಯಾದಾಗ ಜನರಲ್ ಆಗಿ ನಾವು ಭಾಷಣ ಮಾಡಬೇಕಾಗುತ್ತದೆ. ಈಗ ಇಲ್ಲಿ ಸೆಕ್ಷನ್ ಬೈ ಸೆಕ್ಷನ್ ಚರ್ಚೆಮಾಡಿ ಸದನದಲ್ಲಿ ಎಲ್ಲರಿಗೂ ಅರ್ಥವಾಗದೇ ಇದ್ದರೆ ನಾವು ಜನಸಾಮಾನ್ಯರಿಗೆ ಮಾಹಿತಿಯನ್ನು ಇದರ ಬಗ್ಗೆ ಕೊಡುವುದಾದರು ಹೇಗೆ? ಇದು ನಮಗಿರುವಂಥಾದ್ದು ಸಮಸ್ಯೆ.

ಛೇರ್ಮನ್ :- ಮೂರನೇ ತಾರೀಖಿಗೆ ಬಿಲ್ ಪ್ರೆಸೆಂಟ್ ಆಗಿದೆ. ಮೂರನೇ ತಾರೀಖಿನಿಂದ ಇಪ್ಪತ್ನಾಲ್ಕನೇ ತಾರೀಖಿನವರೆಗೆ ನೀವು ಅಧ್ಯಯಮ ಮಾಡುತ್ತಾ ಇರಬಹುದಾಗಿತ್ತು.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :- ಹಾಗಾದರೆ ಇದನ್ನು ಮುಂದುವರೆಸೋಣ. ಸೆಕ್ಷನ್ ಬೈ ಸೆಕ್ಷನ್ ಚರ್ಚೆ ಮಾಡಿಕೊಂಡು ಹೋಗೋಣ. ಇಲ್ಲದಿದ್ದರೆ ಇಲ್ಲಿ ನಾವು ಜನರಲ್ ಆಗಿ ಮಾತನಾಡುವುದಕ್ಕೆ ಶುರುಮಾಡಿದರೆ, ಏನು ಕಾಶ್ಯುಯಲ್ ಆಗಿ ಏನು ಹೇಳಬೇಕು. ಅದನ್ನು ಹೇಳಿಕೊಂಡು ಹೋಗುವಂಥದ್ದು ಆಗುತ್ತದೆ. ಅದಕ್ಕೋಸ್ಕರ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಏನೆಂದರೆ ಇದನ್ನು ವಿವರವಾಗಿ ಚರ್ಚೆ ಮಾಡಿಕೊಂಡು ಹೋದರೆ ಒಳ್ಳೆಯದಾಗುತ್ತದೆ ಎಂದು ಕಾಣುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ :- ಮಾನ್ಯ ಅಧ್ಯಕ್ಷರೇ, ಜನರಿಗೆ ತೊಂದರೆಯಾಗದ ರೀತಿಯಲ್ಲಿ ಇದು ಆಗಬೇಕು. ಏಕೆಂದರೆ ಇದು ಮೊದಲನೇ ಸಲ ತಂದಿರುವಂಥಾದ್ದು. ಇದನ್ನು ಕಾರ್ಯರೂಪಕ್ಕೆ ತರುವಂಥ ವಿಧಾನಗಳ ಬಗ್ಗೆ ಸಮಗ್ರವಾಗಿ ಚರ್ಚೆಯಾಗಿಲ್ಲ. ಇವತ್ತು ಈ ಮಸೂದೆಯನ್ನು ತಂದು ತರಾತುರಿಯಲ್ಲಿ 28ನೇ ತಾರೀಖಿನ ಒಳಗಾಗಿ ನಾವು ಪಾಸ್ ಮಾಡಿ ಕಳುಹಿಸಬೇಕಾಗುತ್ತದೆ. ಆದ್ದರಿಂದ ಸಾಕಷ್ಟು ಇಂತಹ ವಿಷಯಗಳನ್ನು ಇದರಲ್ಲಿ ಅಳವಡಿಸಿಕೊಂಡು ಇದು ಯಾರಿಗೂ ಕೂಡ ತೊಂದರೆಯಾಗದ ರೀತಿಯಲ್ಲಿ ಮತ್ತು ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಹಾಗೂ ವಿಶೇಷವಾಗಿ ಗ್ರಾಹಕರಿಗೆ ತೊಂದರೆಯಾಗದ ರೀತಿಯಲ್ಲಿ ಇರಬೇಕು. ಏಕೆಂದರೆ ಇವತ್ತು ಟ್ರೇಡರ್ಸ್ ಏನು ಮಾಡುತ್ತಾನೆ ಎಂದರೆ ಅವನು ನಮ್ಮ ಮೇಲೆ ಪರ್ಸೆಂಟೇಜ್ ಹಾಕುತ್ತಾನೆ. ತಾವು ಏನು ತೆರಿಗೆ ಹಾಕುತ್ತೀರಿ ಅದು ನಮಗೇ ಟ್ರಾನ್ಸ್‌ಫರ್ ಆಗುತ್ತದೆ. ಅದರ ಪ್ರಕಾರ ಅವನಿಗೇನೂ ತೊಂದರೆಯಾಗುವುದಿಲ್ಲ. ಯಾರು ಪದಾರ್ಥಗಳನ್ನು ಕೊಂಡುಕೊಳ್ಳುತ್ತಾರೆ ಅವನಿಗೆ ಮಾರಾಟ ತೆರಿಗೆ ಅಥವಾ ಬೇರೆ ರೂಪದಲ್ಲಿ ಹಾಕುವಂಥ ತೆರಿಗೆ ಅದು ಅವನಿಗೆ ಹೊರೆಯಾಗಬಾರದು. ಇದರ ಪ್ರಕಾರ ಹೆಚ್ಚು ಹೊರೆಯಾಗುತ್ತದೆ ಎನ್ನುವಂಥಾದ್ದು ಅಭಿಪ್ರಾಯ ಇದೆ. ಇವತ್ತು ನಮ್ಮ ರಾಜ್ಯದಲ್ಲಿ ಉತ್ಪಾದನೆಯಾಗುವಂಥ ಪದಾರ್ಥಗಳು ಮತ್ತು ಅಗತ್ಯ ವಸ್ತುಗಳು, ಅದರ ಜೊತೆಗೆ ರಾಜ್ಯದ ಆದಾಯಕ್ಕೆ ಬೇರೆ ಪರ್ಯಾಯವಾದ ವ್ಯವಸ್ಥೆಯನ್ನು ಏನು ಮಾಡಿಕೊಂಡಿದ್ದೀರಿ ಎಂಬುದೂ ಕೂಡ ಬಹಳ ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿರುವಂಥಾದ್ದು ಇದೆ. ಆದ್ದರಿಂದ ಅಗತ್ಯ ವಸ್ತುಗಳ ಮೇಲೆ ಸಾಕಷ್ಟು ಹೊರೆ ಆಗದ ರೀತಿಯಲ್ಲಿ ಸ್ಥಳೀಯ ಉತ್ಪನ್ನಗಳು ನಮ್ಮಲ್ಲಿ ಏನು ಉತ್ಪಾದನೆಯಾಗುತ್ತದೆ. ಅದರ ಮೇಲೆ ಹೆಚ್ಚು ತೆರಿಗೆ ಹೊರೆ ಆಗದ ರೀತಿಯಲ್ಲಿ ಜೊತೆಗೆ ರಾಜ್ಯದ ಆದಾಯಕ್ಕೆ ಕತ್ತರಿ ಬೀಳದ ರೀತಿಯಲ್ಲಿ ಆಗಬೇಕೆಂದು ತಿಳಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ನಾನು ಮುಗಿಸುತ್ತೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್) :- ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹ ಸಚಿವರು ಮಾತನಾಡುತ್ತಾ ಇದು ನಿಮ್ಮ ಕಾಲದಲ್ಲಿ ತರಬೇಕೆಂದು ಇದೆಲ್ಲಾ ತಯಾರಿ ನಡೆದಿತ್ತು ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಇದನ್ನು ನಮ್ಮ ಸರ್ಕಾರ ಇದ್ದಾಗಲೂ ಕೂಡ ಅನೇಕಸಾರಿ ಈ ವ್ಯಾಟ್‌ನ ಅನುಕೂಲಗಳು, ಅನಾನುಕೂಲಗಳು ಏನಾಗುತ್ತವೆ ಎಂದು ಚರ್ಚೆಯಾಗಿರತಕ್ಕಂಥಾದ್ದು, ನಾವು ಇದನ್ನು ಪರಿಶೀಲನೆ ಮಾಡಿರತಕ್ಕಂಥಾದ್ದು ಇವೆಲ್ಲವೂ ಸಹ ನಿಜ. ಇವತ್ತು ತಂದಿರತಕ್ಕಂಥ ಮಸೂದೆಗೆ ತಾತ್ವಿಕವಾದಂಥ ಒಪ್ಪಿಗೆಯನ್ನು ನಾನು ಸೂಚಿಸುತ್ತಾ, ಇವತ್ತು ವಿವರಗಳನ್ನು ಸ್ವಲ್ಪಮಟ್ಟಿಗೆ ನಾನು ಕಣ್ಣು ಹಾಯಿಸಿದ್ದರ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಇಚ್ಛೆಪಡುತ್ತೇನೆ. ಸ್ವಾಮಿ ತಮ್ಮ ಎರಡು-ಮೂರು ಶೆಡ್ಯೂಲ್‌ನ್ನು ಅದರ

ಪ್ರಕಾರ ಮಾಡಿದ್ದೀರಿ. ಶೆಡ್ಯೂಲ್ 1ರಲ್ಲಿ ಟ್ಯಾಕ್ಸ್ ಏನೂ ಇಲ್ಲ ಎನ್ನತಕ್ಕದ್ದನ್ನು ತಾವು ಹೇಳಿದ್ದೀರಿ. ಅದರಲ್ಲಿ ಮೊದಲನೇ ಶೆಡ್ಯೂಲ್‌ನಲ್ಲಿ ವೀಕ್ಷದಲೆ - agricultural implements manually operated and animal driven ಅದಕ್ಕೆಲ್ಲವೂ ಟ್ಯಾಕ್ಸ್ ಇಲ್ಲ ಎನ್ನತಕ್ಕದ್ದನ್ನೂ ಸಹ ಹೇಳಿದ್ದೀರಿ. ಆ ಮೇಲೆ ಗಿಡ, ಹಣ್ಣು, ತರಕಾರಿ ಇವೆಲ್ಲದಕ್ಕೂ ಸಹಿತ ಇಲ್ಲವೆಂದು ಹೇಳಿದ್ದೀರಿ. ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ ನಿಮಗೂ ನಮಗೂ ತಕರಾರು ಎಲ್ಲಿ ಬರುತ್ತದೆ ಎಂದರೆ ನೀವು ತಂದಿರತಕ್ಕಂಥ ಮೂರನೇ ಶೆಡ್ಯೂಲ್‌ನಲ್ಲಿ ಈ ಮೂರನೇ ಷೆಡ್ಯೂಲ್‌ಗೆ ನನ್ನ ತೀವ್ರವಾದಂಥ ವಿರೋಧವನ್ನು ಸೂಚಿಸಬೇಕಾಗುತ್ತದೆ. ಸ್ವಾಮಿ ಇದರಲ್ಲಿ ಏನಿದೆ ಎಂದರೆ - agricultural implements not operated manually or not driven by animals ಇದರ ವಾಸ್ತವಾಂಶ ಮತ್ತು ಈ ಮಸೂದೆ ನಿಜವಾಗಿಯೂ ಸರ್ಕಾರಕ್ಕೆ ಅರ್ಥವಾಗಿದೆಯೋ ಇಲ್ಲವೋ ಗೊತ್ತಿಲ್ಲ. ಕಳೆದ ಎರಡು ವರ್ಷಗಳಿಂದ ನಮ್ಮ ರಾಜ್ಯದ ಅನೇಕ ಕಡೆ ಮಳೆ ಇಲ್ಲದೆ ದನಕರುಗಳಿಗೆ, ಎತ್ತುಗಳಿಗೆ ಮೇವು, ಇಲ್ಲ. ಈ ಒಂದು ವರ್ಷದಲ್ಲೇ ಶೇಕಡ ಐವತ್ತರಷ್ಟು ಎತ್ತುಗಳು ಕಸಾಯಿಖಾನೆಗೆ ಹೋಗಿದ್ದಾವೆ. ಏನಾಗಿದೆ ವ್ಯವಸಾಯ ಎಂಬುದನ್ನು ಸರ್ಕಾರ ಲೆಕ್ಕ ಮಾಡಿಸಬೇಕು. ಶೇಕಡ 50ರಷ್ಟು ಎತ್ತುಗಳು ಇವತ್ತಿನ ದಿವಸ ಇಲ್ಲ. ಮೊದಲು ಸಾಮಾನ್ಯ ಹಳ್ಳಿ ಎಂದರೂ ನೂರು ಜೊತೆ ಎತ್ತುಗಳು ಇರುತ್ತಿದ್ದವು. ಆದರೆ ಇವತ್ತು ಮೂರು ಜೊತೆ ಎತ್ತುಗಳು ಇರುವ ಕಡೆಗಳಲ್ಲಿ ಐದರಿಂದ ಹತ್ತು ಜೊತೆ ಇರುವ ಮಟ್ಟಕ್ಕೆ ಬಂದಿದೆ. ದುರಾದೃಷ್ಟವಶಾತ್ ಇದೇ ರೀತಿ ಕ್ಷಾಮ ಏನಾದರೂ ಮುಂದುವರೆದರೆ ಸಂಪೂರ್ಣವಾಗಿ ಎತ್ತುಗಳು ಮಾಯವಾಗತಕ್ಕದ್ದನ್ನು ನೋಡುತ್ತಿದ್ದೇವೆ. ಆದ್ದರಿಂದ ಏನಾಗುತ್ತಿದೆಯೆಂದರೆ ಅನೇಕ ಕಡೆಗಳಲ್ಲಿ ರೈತರು 50 ರಿಂದ 60 ಪರಸೆಂಟ್‌ನಷ್ಟು ಯಂತ್ರಗಳನ್ನು ಉಪಯೋಗಿಸತಕ್ಕ ಪರಿಸ್ಥಿತಿ ರಾಜ್ಯದಲ್ಲಿ ಉಂಟಾಗಿದೆ. ಈ ವರ್ಷ ಅದು ಇನ್ನೂ ಭೀಕರವಾಗತಕ್ಕದ್ದು ಆಗುತ್ತಿದೆ. ಮುಂದಿನ ವರ್ಷದ ಮುಂಗಾರು ಮಳೆಯಾದಮೇಲೆ ಬಾಡಿಗೆಗೆ ಟ್ರಾಕ್ಟರೇ ಸಿಗುವುದಿಲ್ಲ. ಏಕೆಂದರೆ ಎತ್ತುಗಳೆಲ್ಲಾ ಖಾಲಿಯಾಗಿದೆ. ನಮ್ಮ ರಾಜ್ಯದಲ್ಲಿ ಬಹಳ ದೊಡ್ಡದಾದ ಎತ್ತುಗಳ ಜಾತ್ರೆಗಳು ನಡೆಯುತ್ತವೆ. ಮೈಸೂರು ಚುಂಚನಗಿರಿ ಮತ್ತು ಇಳಿದಿರತಕ್ಕ ಕಡೆ ಪ್ರತಿ ಜಿಲ್ಲೆಯಲ್ಲೂ ಎತ್ತುಗಳ ಜಾತ್ರೆ ನಡೆಯುತ್ತದೆ. ಅಲ್ಲಿ ಎಷ್ಟು ಜೊತೆ ಎತ್ತುಗಳು ಎಲ್ಲಿಗೆ ಹೋಯಿತು ಎಂಬ ಬಗ್ಗೆ ಸರ್ಕಾರ ವರದಿಯನ್ನು ತರಿಸಬೇಕು. ಇನ್ನು ಮುಂದೆ ವ್ಯವಸಾಯ ಪರಿಸ್ಥಿತಿಯ ಒತ್ತಡದಿಂದ ಟ್ರಾಕ್ಟರ್‌ರನ್ನೇ ಅವಲಂಬಿಸತಕ್ಕಂಥ ಸ್ಥಿತಿ ರಾಜ್ಯದಲ್ಲಿ ಉಂಟಾಗುತ್ತದೆ. ದಕ್ಕೆ ತಾವು ಏನು ಮಾಡಿದ್ದೀರೆಂದರೆ, ವ್ಯವಸಾಯದಲ್ಲಿ ಉಪಯೋಗಿಸತಕ್ಕಂಥ ನಾನಾ ರೀತಿಯಾದ ಉಪಕರಣಗಳ ಮೇಲೆ, ಬಿತ್ತಲು, ಉಳುಮೆ ಮಾಡಲು, ಪೈರನ್ನು ನೆಡಲು, ಔಷಧಿ ಸಿಂಪರಣೆ ಮಾಡಲು ನಾನು ರೀತಿಯಾದ ಉಪಕರಣಗಳು ಬಂದಿದ್ದಾವೆ, ಅವುಗಳೆಲ್ಲದರ ಮೇಲೆ ಶೇಕಡ 4 ರಷ್ಟು ತೆರಿಗೆಯನ್ನು ಹಾಕುವುದಕ್ಕೆ ವ್ಯಾಟ್‌ನಲ್ಲಿ ಅದನ್ನು ಸೇರಿಸಿದ್ದೀರಿ. ಇದರಿಂದ ರೈತರ ಮೇಲೆ ಬಂಡೆಯನ್ನು ಎಳೆಯತಕ್ಕ ಕೆಲಸ ಮೂರನೇ ಶೆಡ್ಯೂಲ್ಡ್‌ನಲ್ಲಿ ಆಗುತ್ತಿದೆ. ಅಡಿಕೆ ಮೇಲೆ ಶೇಕಡ 4 ರಷ್ಟು ತೆರಿಗೆ ಬೀಳುತ್ತದೆ, ನಾವು ಅದನ್ನು ಬೆಳೆಯುವುದಿಲ್ಲ, ಬೆಳೆಯುವವರು ಅದರ ಬಗ್ಗೆ ಏನು ಹೇಳುತ್ತಾರೋ ಗೊತ್ತಿಲ್ಲ. ಬೊಂಬು, ಇದನ್ನು ರೈತರೇನೂ ಬೆಳೆಯುವುದಿಲ್ಲ. ಸರ್ಕಾರದಿಂದ ಕಾಡಿನಲ್ಲಿ ಬೆಳೆಯತಕ್ಕದ್ದು, ಬೀಡಿ ಎಲೆ ನಮ್ಮ ರಾಜ್ಯದಲ್ಲಿ ಹೆಚ್ಚು ಬೆಳೆಯುವುದಿಲ್ಲ. ಆದರೆ ಅವುಗಳನ್ನು ಬಳಕೆ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ರಾಜ್ಯದಲ್ಲಿ ಇದ್ದಾರೆ. ಬೀಡಿ ಸುತ್ತತಕ್ಕ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮಲ್ಲಿ ತೊಡಗಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮ್ಮ ಜಿಲ್ಲೆಯಲ್ಲಿ

ಬೀಡಿ ಸುತ್ತತಕ್ಕದ್ದು ಬಹಳ ದೊಡ್ಡ ಪ್ರಮಾಣದಲ್ಲಿದೆ. ತಾವು ಇದನ್ನು ತೀವ್ರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಶೇಕಡ 4 ರಷ್ಟು ತೆರಿಗೆಯನ್ನು ಹಾಕಿದ್ದಾರೆ. ಅದೇ ರೀತಿ ಸೈಕಲ್ ಮೇಲೆ ಹಾಕಿದ್ದಾರೆ. ಎಲ್ಲದಕ್ಕಿಂತ ವ್ಯವಸಾಯದಲ್ಲಿ ಉಪಯೋಗಿಸತಕ್ಕಂಥ ಬೋನ್ ಮಿಲ್, ಎಲುಬಿನ ಪುಡಿಯಮೇಲೂ ಹಾಕಿದ್ದಾರೆ. ನೀವು ಒಂದು ಕಡೆ ಆರ್ಗ್ಯಾನಿಕ್ ಫಾರ್ಮಿಂಗ್‌ನ್ನು ಮಾಡಬೇಕೆಂದು ಹೇಳುತ್ತೀರಿ. ರಸಾಯನಿಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬನೆ ಮಾಡಬಾರದೆಂದೂ ಹೇಳುತ್ತೀರಿ, ಆದರೆ ಇವತ್ತು ಬೋನ್‌ಮೀಲ್ ಮೇಲೆ ಶೇಕಡ 4 ರಷ್ಟು ತೆರಿಗೆ ಹಾಕತಕ್ಕ ಪ್ರಪೋಸಲ್‌ನ್ನು ಇಟ್ಟಿದ್ದೀರಿ. ನಮ್ಮ ರಾಜ್ಯದಲ್ಲಿ ರಸಾಯನಿಕ ಗೊಬ್ಬರಗಳ ಮೂಲಕ ಸುಮಾರು 100 ಕೋಟಿ ರೂಪಾಯಿ ಆದಾಯ ಸರ್ಕಾರಕ್ಕೆ ಬರಬಹುದು. ಮೊದಲು ಇದಕ್ಕೆ ಎಂಟ್ರಿಟ್ಯಾಕ್ಸ್ 4 ಪರ್‌ಸೆಂಟ್ ಇತ್ತು. ಸೇಲ್ಸ್ ಟ್ಯಾಕ್ಸ್ ಸಹ ಇತ್ತು, ನಾವು ಅದನ್ನು ವಜಾ ಮಾಡಿದ್ದೆವು ಎಂಬುದನ್ನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಆದರೆ ಎರಡು ಮೂರು ವರ್ಷಗಳಿಂದ ಈ ಸರ್ಕಾರ ಬಂದಮೇಲಿಂದಲೂ ಹೇಳುತ್ತಿದ್ದೇನೆ. ಗೊಬ್ಬರದ ಮೇಲೆ ಹಾಕಿರತಕ್ಕ ತೆರಿಗೆ. ರೈತ ಇವತ್ತು ಬೆಂದುಹೋಗುತ್ತಿರುವ ಸಂದರ್ಭದಲ್ಲಿ ಗೊಬ್ಬರದ ಮೇಲೆ ಶೇಕಡ 4 ರಷ್ಟು ತೆರಿಗೆಯನ್ನೇನು ಹಾಕಿದ್ದೀರಿ ಅದನ್ನು ರದ್ದು ಮಾಡಬೇಕು ಎಂಬ ಪ್ರಬಲವಾದ ಒತ್ತಾಯವನ್ನು ನಾವು ಮಾಡುತ್ತಾ ಬಂದಿದ್ದೇವೆ. ಆದರೆ ಸರ್ಕಾರ ಅದರ ಬಗ್ಗೆ ಇವತ್ತು ಗಮನ ಹರಿಸಿಲ್ಲ. ಔಷಧಿಗಳು, ನುಸಿ ರೋಗ ಬಂದು ತೆಂಗಿನ ಬೆಳೆ ಹೋಯಿತು, ತೆಂಗಿನ ಮರಗಳನ್ನು ಏನಾದರೂ ಉಳಿಸಿಕೊಳ್ಳಬೇಕೆಂದರೆ, ಕೃಷಿಗೆ ಬೇಕಾಗಿರುವಂಥ ರಾಸಾಯನಿಕಗಳನ್ನು ಕೊಂಡುಕೊಂಡು ಬರಬೇಕಾಗಿದ್ದರೆ ಶೇಕಡ 4 ರಷ್ಟು ತೆರಿಗೆಯನ್ನು ಕೊಡಬೇಕಾಗಿದೆ. ರೈತನಿಗೆ ಇವತ್ತು ಬೆಳೆಯೇ ಇಲ್ಲ. ತೆಂಗಿನ ಕಾಯಿಯ ಬೆಳೆಯೇ ಇಲ್ಲದಿರುವ ಸಂದರ್ಭದಲ್ಲಿ, ಮರವನ್ನಾದರೂ ಉಳಿಸಿಕೊಳ್ಳುವ ರೈತ ಏನಾದರೂ ಪ್ರಯತ್ನ ಪಟ್ಟರೆ ಅದಕ್ಕೂ ಶೇಕಡ 4 ರಷ್ಟು ತೆರಿಗೆಯನ್ನು ಹಾಕಿರುವುದನ್ನು ನೋಡುತ್ತಿದ್ದೇವೆ. ಇನ್ನು ಎಡಿಬಲ್ ಆಯಿಲ್ ಬಗ್ಗೆ ಹೇಳುವುದಾದರೆ, ನನಗಿಂತ ಹೆಚ್ಚು ವ್ಯವಸಾಯದ ಜ್ಞಾನ ಇರುವವರ ಅಡ್ವೈಸ್‌ನ್ನೆಲ್ಲಾ ತಾವು ಕೇಳಿರುತ್ತೀರಿ. ಸಂತೋಷ. ಇವತ್ತು ಇಡೀ ದೇಶ ಆಹಾರದಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದೆ. ಅಡಿಗೆಯಲ್ಲಿ ಉಪಯೋಗಿಸತಕ್ಕ ಎಡಿಬಲ್ ಎಣ್ಣೆ ಮತ್ತು ಬೇಳೆಕಾಳಿನಲ್ಲಿ ದೇಶ ಬಹಳ ಪ್ರಯತ್ನ ಪಟ್ಟಿದೆ. ಟೆಕ್ನಾಲಜಿ ಮೆಶಿನ್ ಆನ್ ಆಯಿಲ್ಸ್‌ನ್ನೂ ಕೂಡ ಕಾರ್ಯಗತ ಮಾಡಿರತಕ್ಕದ್ದು ನಮ್ಮ ದೇಶದಲ್ಲಿ ನಡೆದಿದೆ. ಅದೇ ರೀತಿ ಇವತ್ತು ಲಕ್ಷ, ಲಕ್ಷಗಟ್ಟಲೆ ಹೊರದೇಶದಿಂದ, ಅದರಲ್ಲೂ ಮಲೇಶಿಯಾ ಅಂಥ ದೇಶದಿಂದ ಎಣ್ಣೆಯನ್ನು ತರಿಸಿಕೊಳ್ಳುತ್ತಿದ್ದೇವೆ. ಇವತ್ತು ನಮ್ಮ ಬೆಳೆಯುತ್ತಿರುವ ಎಣ್ಣೆಯ ಮೇಲೆ, ಅದು ಕಡಲೆಕಾಯಿ ಎಣ್ಣೆ ಇರಬಹುದು, ಎಳ್ಳೆಣ್ಣೆ ಇರಬಹುದು, ಬೇರೆ ಬೇರೆ ಎಣ್ಣೆಗಳು ಇರಬಹುದು, ನೀವು ಎಡಿಬಲ್ ಆಯಿಲ್ ಮೇಲೂ ಶೇಕಡ 4 ರಷ್ಟು ತೆರಿಗೆಯನ್ನು ಹಾಕತಕ್ಕ ಪ್ರಯತ್ನ ಮಾಡಿದ್ದೀರಿ. ಅನಂತರ ರೈತರು ಬೆಳೆದಂಥ ಗೋಧಿಹಿಟ್ಟು ಇರಬಹುದು, ರಾಗಿ ಹಿಟ್ಟು ಇರಬಹುದು ಇದರ ಮೇಲೆಲ್ಲಾ ಶೇಕಡ 4 ರಷ್ಟು ತೆರಿಗೆಯನ್ನು ಹಾಕತಕ್ಕ ಪ್ರಯತ್ನವನ್ನು ತಾವು ಮಾಡಿದ್ದೀರಿ. ಇದನ್ನು ದಯವಿಟ್ಟು ಕೈಬಿಡಬೇಕು. ಮುಂದೆ ಪರಿಸ್ಥಿತಿ ಸುಧಾರಣೆಯಾದಂಥ ಕಾಲದಲ್ಲಿ, ರೈತರು ಚೇತರಿಸಿಕೊಂಡ ಮೇಲೆ ನೀವು ಇವುಗಳ ಮೇಲೆ ತೆರಿಗೆಯನ್ನು ಹಾಕಿ. ತೆರಿಗೆಯನ್ನು ಹಾಕಿ ತೆರಿಗೆಯನ್ನು ವಸೂಲಿ ಮಾಡದೆಯೇ ಯಾರೂ ಕೂಡ ಸರ್ಕಾರವನ್ನು ನಡೆಸಲು ಆಗುವುದಿಲ್ಲ. ಆದರೆ ರೈತರ ಪರಿಸ್ಥಿತಿ ಯಾವ ಮಟ್ಟದಲ್ಲಿದೆ ಎಂಬುದನ್ನು ಅರ್ಥ ಮಾಡಿಕೊಂಡು ತಾವೇನು

ಕೃಷಿಗೆ ಸಂಬಂಧಪಟ್ಟ ವಸ್ತುಗಳ ಮೇಲೆ ಶೇಕಡ 4 ರಷ್ಟು ತೆರಿಗೆಯನ್ನು ಹಾಕಲು ಪ್ರಯತ್ನ ಪಟ್ಟಿದ್ದೀರಿ ಇದನ್ನು ದಯಮಾಡಿ ಕೈಬಿಡಬೇಕು ಎಂಬ ಒತ್ತಾಯವನ್ನು ಮಾಡುತ್ತೇನೆ. ಆಹಾರ ಉತ್ಪಾದನೆಯಲ್ಲಿ ಇಡೀ ದೇಶ ಅಗಾಧವಾದಂಥ ಸಾಧನೆಯನ್ನು ಮಾಡಿದೆ. ಇವತ್ತು ರೈತ ಏತಕ್ಕೆ ಆರ್ಥಿಕವಾಗಿ ಹಿಂದುಳಿದಿದ್ದಾನೆ. ತುಳಿತಕ್ಕೆ ಸಿಕ್ಕಿದ್ದಾನೆಂದರೆ, ಕೃಷಿಯಲ್ಲಿ ಉತ್ಪಾದನೆಯಾಗತಕ್ಕಂಥ ಉತ್ಪಾದನೆಗಳೇನಿವೆ ಅವುಗಳು ಬೇರೆ ದೇಶಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಸಂಸ್ಕರಣೆಗೆ ಒಳಪಡುತ್ತಿದೆ. ಮಲೇಶಿಯಾ ಅಂಥ ದೇಶದಲ್ಲಿ ತೋಟದ ಬೆಳೆಗಳು ಶೇಕಡ 83ರಷ್ಟು ಸಂಸ್ಕರಣೆಗೆ ಒಳಪಡುತ್ತದೆ. ಅಮೇರಿಕಾದಲ್ಲಿ ಶೇಕಡ 75ರಷ್ಟು ಸಂಸ್ಕರಣೆಗೆ ಒಳಪಡುತ್ತದೆ. ಆದರೆ ನಮ್ಮ ದೇಶದಲ್ಲಿ ಸಂಸ್ಕರಣೆಗೆ ಒಳಪಡುತ್ತಿರತಕ್ಕದ್ದು 0.6 ರಿಂದ 2 ಪರ್‌ಸೆಂಟ್‌ವರೆಗೆ ಮಾತ್ರ. ಅಂದರೆ ಇಡೀ ಪ್ರಪಂಚದಲ್ಲಿ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಕೃಷಿ ಉತ್ಪನ್ನಗಳು ನಮ್ಮ ದೇಶದಲ್ಲಿ ಸಂಸ್ಕರಣೆಗೆ ಒಳಪಡುತ್ತಿದೆ. ಆದ್ದರಿಂದ ತಾವು ಸಂಸ್ಕರಣೆಗೆ ಒಳಪಡುವುದಕ್ಕೆ ನೀವು ಆದ್ಯತೆಯನ್ನು ಕೊಡಬೇಕು. ಆ ರೀತಿ ಆದರೆ ಮಾತ್ರ ರೈತರು ಬೆಳೆದಿರುವ ಬೆಳೆಗಳಿಗೆ ಬೆಲೆ ಬರುತ್ತದೆ. ರೈತರಿಗೆ ತಾವು ಬೇರೆ ಬೇರೆ ರೀತಿಯಲ್ಲಿ ಸಬ್ಸಿಡಿ ಕೊಡುವುದರ ಜೊತೆಗೆ, ಅವನು ಬೆಳೆದಂಥ ಪದಾರ್ಥಗಳಿಗೆ ಯೋಗ್ಯವಾದ ಬೆಲೆಯನ್ನು ತರತಕ್ಕ ವ್ಯವಸ್ಥೆಯನ್ನು ಮಾಡಿದರೆ ರೈತರಿಗೆ ಬೇರೆ ರೀತಿಯಾಗಿ ಸಬ್ಸಿಡೈಸ್ಡ್ ಮಾಡಲು ಸಾಧ್ಯವಾಗುತ್ತದೆ. ನಾವು ಸಂಸ್ಕರಣೆಯಲ್ಲಿ ಇಡೀ ಪ್ರಪಂಚದಲ್ಲೇ ಹಿಂದುಳಿದ್ದಿದ್ದೇವೆ. ನನ್ನ ಹತ್ತಿರ ನೆದರ್‌ಲ್ಯಾಂಡ್‌ನ ಅಂಕಿಅಂಶಗಳು ಇದೆ. ನಾನು ಆ ಲೆಕ್ಕವನ್ನೆಲ್ಲಾ ಮರೆತಿದ್ದೇನೆ. ತಕ್ಷಣದಲ್ಲಿ ಜ್ಞಾಪಕಕ್ಕೆ ಬರುತ್ತಿಲ್ಲ. ನೆದರ್‌ಲ್ಯಾಂಡ್‌ನಂದೇ ಸಣ್ಣ ಪುಟ್ಟ ದೇಶವು ಹಂದಿಮಾಂಸ, ಹಾಲು, ಅಲಂಕಾರಿಕ ಗಿಡಗಳು ಆಲೂಗಡ್ಡೆ ಇವುಗಳಲ್ಲಿ ಪ್ರಪಂಚದಲ್ಲೇ ಮಹತ್ತರವಾದ ಸಾಧನೆಯನ್ನು ಮಾಡಿರಬೇಕಾದರೆ ನಮ್ಮಂಥ ದೊಡ್ಡ ದೇಶವೂ ಸಾಧನೆಯನ್ನು ಮಾಡಲು ಸಾಧ್ಯವಿದೆ. ಅದು ಯಾವಾಗ ಸಾಧ್ಯವೆಂದರೆ, ರೈತರು ಬೆಳೆದಂಥ ವಸ್ತುಗಳಿಗೆ ಯೋಗ್ಯವಾದ ಬೆಲೆಯನ್ನು ಕೊಡತಕ್ಕಂಥ ವ್ಯವಸ್ಥೆ ಇಲ್ಲಿ ಉಂಟಾದರೆ ಮಾತ್ರ ಅದು ಸಾಧ್ಯವಾಗುತ್ತದೆ. ಆಹಾರಧಾನ್ಯಗಳನ್ನು ಬೆಳೆಯತಕ್ಕದ್ದು ಮಾತ್ರವಲ್ಲ ಸಂಸ್ಕರಣೆಯ ಪ್ರಮಾಣವನ್ನೂ ಜಾಸ್ತಿ ಮಾಡಬೇಕು. ಹಾಲನ್ನು ಉತ್ಪಾದನೆ ಮಾಡುವುದರಲ್ಲಿ ನಮ್ಮ ದೇಶ ಇಡೀ ಪ್ರಪಂಚದಲ್ಲೇ ಮೊದಲನೆ ಸ್ಥಾನದಲ್ಲಿದೆ. ಆದರೆ ಹಾಲನ್ನು ಉತ್ಪಾದನೆ ಮಾಡುವವನ ಆರ್ಥಿಕ ಪರಿಸ್ಥಿತಿ, ಬೇರೆ ಬೇರೆ ಉತ್ಪನ್ನಗಳನ್ನು ಉತ್ಪಾದನೆ ಮಾಡುವವನ ಆರ್ಥಿಕ ಪರಿಸ್ಥಿತಿ ಏನಾಗಿದೆ ಎಂಬುದನ್ನು ಅವಲೋಕನ ಮಾಡಿದಾಗ ನೀವು ರೈತನ ನೆರವಿಗೆ ಬರುವುದು ಅತ್ಯಂತ ಅವಶ್ಯಕವಾಗಿದೆ. ಇವತ್ತು ವ್ಯಾಟ್‌ನ ಜೊತೆಗೆ ಡಬ್ಲ್ಯೂ.ಟಿ.ಓ. ಸಹ ಬಂದಿದೆ. ಇತ್ತೀಚಿಗೆ ಅಮೇರಿಕಾ ದೇಶದಲ್ಲಿ ರೈತನಿಗೆ ಕೊಡುತ್ತಿದ್ದ ಸಬ್ಸಿಡಿಗಳೇನಿವೆ, ಮೊನ್ನೆ ನಡೆದಂಥ ಚುನಾವಣೆಯ ಮೊದಲಿನ ಸಂದರ್ಭದಲ್ಲಿ, ರೈತರಿಗೆ ನೀಡತಕ್ಕ ಸಬ್ಸಿಡಿಗಳೇನಿತ್ತು, ಇದನ್ನು ಶೇಕಡ 80ರಷ್ಟು ಹೆಚ್ಚಿಗೆ ಮಾಡಿದ್ದಾರೆ. ಅಲ್ಲಿ ಎರಡು ವರ್ಷಗಳಿಗೊಂದು ಸಾರಿ ಚುನಾವಣೆಗಳನ್ನು ನಡೆಯುತ್ತವೆ. ಅಂತಹ ಸಮೃದ್ಧಿಯಾದಂಥ ದೇಶದಲ್ಲಿ ಶೇಕಡ 80 ರಷ್ಟು ಹೆಚ್ಚಿಗೆ ಮಾಡಿರತಕ್ಕ ಸಂದರ್ಭದಲ್ಲಿ, ನಮ್ಮ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದಾರೆಂದರೆ, ರೈತನಿಗೆ ಹೊರೆಯಾಗತಕ್ಕ, ಹೆಚ್ಚು ಮಾಡತಕ್ಕ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ ಹಾಗಾದರೆ ನಮ್ಮ ದೇಶ ಮತ್ತು ನಮ್ಮ ರಾಜ್ಯ ವಿಶ್ವ ಮಾರುಕಟ್ಟೆಯಲ್ಲಿ, ವ್ಯವಸಾಯ ರಂಗದಲ್ಲಿ ಸ್ಪರ್ಧೆ ಮಾಡುವುದು ಅನಾವಶ್ಯಕ ಯಾವತ್ತಿಗೂ ಕೂಡ ಈ ಪರಿಸ್ಥಿತಿ ಇದ್ದರೆ, ನಾವು ಕೃಷಿ ರಂಗದಲ್ಲಿ ನಮ್ಮ ಸಾಮ್ರಾಜ್ಯವನ್ನು ಸ್ಥಾಪಿಸುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಅದು ಆಗಬೇಕಾಗಿದ್ದರೆ

ನಾನು ಏನೇನು ಹೇಳಿದ್ದೇನೆ. ಈ ರಿಯಾಯಿತಿಗಳನ್ನು ರೈತರಿಗೆ ಕೊಡಬೇಕಾಗಿರತಕ್ಕಂಥಾದ್ದು ಮುಖ್ಯ. ಮತ್ತೆ ಸಂಸ್ಕರಣೆಗೆ ಒಳಪಟ್ಟಿರತಕ್ಕಂಥ ಈ ಕೃಷಿ ಉತ್ಪನ್ನಗಳು ಇದು ಅಲೈಡ್ ಇಂಡಸ್ಟ್ರೀಸ್, ಅಗ್ರಿಕಲ್ಚರ್ ಅಂಡ್ ಅಲೈಡ್ ಇಂಡಸ್ಟ್ರೀಸ್ ಈ ಸಂಸ್ಕರಣೆ ಯಾವ ಮಟ್ಟದಲ್ಲಿ ಇದೆಯೆಂಬುದನ್ನೂ ಹೇಳಿದ್ದೇವೆ. ನಾವೆಲ್ಲರೂ ಅದನ್ನು ನೆಗ್ಲೆಟ್ ಮಾಡುತ್ತಾ ಬಂದಿದ್ದೇವೆ. ನಾನು ಇದರ ಬಗ್ಗೆ ಬೇರೆ ಸಂದರ್ಭದಲ್ಲಿ ಚರ್ಚೆ ಮಾಡುವುದಕ್ಕೆ ಮತ್ತು ವಿವರವಾಗಿ ಮಾತನಾಡುವುದಕ್ಕೂ ಕೂಡ ಸಿದ್ದನಿದ್ದೇನೆ. ಸಂಸ್ಕರಣೆಗೆ ಒಳಪಡತಕ್ಕಂಥ ಈ ಆಹಾರ ಪದಾರ್ಥಗಳು ಅಥವಾ ಜ್ಯೂಸ್ ಆಗಲೀ, ಹಣ್ಣಾಗಲೀ ಇತ್ಯಾದಿ ಏನೇನು ಸಂಸ್ಕರಣೆಗೆ ಒಳಪಡುತ್ತಾ ಇವೆ, ಅವುಗಳ ಮೇಲೆಯೂ ಟ್ಯಾಕ್ಸ್ ಫ್ರೀ ಮಾಡತಕ್ಕಂಥಾದ್ದು ಅವಶ್ಯಕತೆ ಇದೆ. ಯಾರೋ ಒಬ್ಬ ಕಾರ್ಖಾನೆ ಇಟ್ಟಿರುವವನಿಗೆ ಅನುಕೂಲ ಮಾಡಿಕೊಡಬಹುದೆಂದು ನೀವು ಹೇಳಬಹುದು. ಆ ರೀತಿ ಅಲ್ಲ. ಇದರಿಂದ ಪರೋಕ್ಷವಾಗಿತಕ್ಕಂಥ ಅನುಕೂಲ ಯಾರಿಗುಂಟಾಗುತ್ತದೆ. ಯಾರಿಗೆ ಸಿಗುತ್ತದೆಂದರೆ ರೈತನಿಗೆ ಸಿಗುತ್ತದೆ. ರೈತನಿಗೆ ಸಿಕ್ಕುವ ಕಾರಣದಿಂದ, ಈ ಕೆಲವನ್ನು ತತ್‌ಕ್ಷಣ ತಿದ್ದುಪಡಿಯನ್ನು ಈ ಮಸೂದೆಗೆ ತಂದು ಅಥವಾ ಈ ಷೆಡ್ಯೂಲನ್ನು, ನೀವು ಒಂದನೇ ಷೆಡ್ಯೂಲ್ ಎಂದು ಏನು ಕರೆದಿದ್ದೀರಿ, ಅದಕ್ಕೆ ನಾನು ಸೂಚಿಸಿರತಕ್ಕಂಥ ಕೆಲವನ್ನು ಅಲ್ಲಿಗೆ ತರಬೇಕಾಗಿರುವುದು ಅತಿ ಅವಶ್ಯಕ ಇದೆ. ನಾನು ಮುಖ್ಯಮಂತ್ರಿಗಳನ್ನೂ ಭೇಟಿಯಾಗಿ ಈ ಕೆಲವನ್ನು ಒತ್ತಾಯ ಮಾಡಿ ಹೇಳಿದ್ದೇನೆ ಮತ್ತು ಅವರ ಗಮನಕ್ಕೂ ತಂದಿದ್ದೇನೆ. ಆದರೆ, ಮಸೂದೆಯಲ್ಲಿ ಇವತ್ತಿನದಿವಸ ಅದು ಬಂದಿಲ್ಲ. ಈ ಲೋಪವನ್ನು ದಯವಿಟ್ಟು ತಿದ್ದುಪಡಿ ಮೂಲಕ ಸರಿಪಡಿಸಬೇಕೆಂಬ ಮನವಿಯನ್ನು ಮಾಡಿ

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮುಖ್ಯಮಂತ್ರಿಗಳು ನಿಮ್ಮ ಮನವಿಯನ್ನು ಕೇಳಿಸಿಕೊಳ್ಳುತ್ತಾ ಇಲ್ಲ. ಅವರ ಗಮನ ಬೇರೆ ಕಡೆ ಇದೆ.

ಶ್ರೀ ಸಿ. ಭೈರೇಗೌಡ :- ನಾನೇನು ಮಾಡೋಣ? ಮಾತನಾಡತಕ್ಕಂಥಾದ್ದು ನನ್ನ ಕೆಲಸ ಕೇಳುವುದು, ಬಿಡುವುದು ಅವರ ಕೆಲಸ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಸಚಿವ ಸಂಪುಟದ ಉಪ ಸಮಿತಿ 6 ಗಂಟೆಗೆ ಇತ್ತು. ದಿನಗೂಲಿ ನೌಕರರ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದಿರಿ, ಅದಕ್ಕೆ ಹೋಗುವುದೇ ಅಥವಾ ಬೇಡವೋ ಎಂದು ಕೇಳುತ್ತಾ ಇದ್ದೆ. ತಮ್ಮ ಪ್ರತಿಯೊಂದು ಮಾತೂ ಕೇಳಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ :- ಅಗ್ರಿಕಲ್ಚರಲ್ ಪ್ರೊಡ್ಯೂಸ್ ಪ್ರಾಡಕ್ಟ್ಸ್‌ಗೆ ತೆರಿಗೆ ಹಾಕಬೇಡಿ ಮತ್ತು ಸಂಸ್ಕರಣೆ ಮಾಡುವಂಥಾದ್ದು ಹಾಗೂ ಸಣ್ಣಪುಟ್ಟ ಉಪಕರಣಗಳ ಮೇಲೆ ತೆರಿಗೆ ಹಾಕಬೇಡಿ ಎಂದು ಹೇಳಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅಗ್ರಿಕಲ್ಚರ್‌ನಲ್ಲಿ ಹೆಚ್ಚಿನ ಉತ್ಪಾದನೆ ಮಾಡತಕ್ಕ ದೇಶಗಳಿಗೆ ಹೋಲಿಸಿದಾಗ ನಮ್ಮ ಕರ್ನಾಟಕ ಹೆಚ್ಚಿಗೆ ಮುಂದೆ ಇದೆಯೆಂದೂ ಹೇಳಿದ್ದೀರಿ. ನಿಮ್ಮ ಎಲ್ಲಾ ಮಾತುಗಳನ್ನೂ ನಾವು ಕೇಳಿಸಿಕೊಂಡಿದ್ದೇವೆ.

ಶ್ರೀ ಸಿ. ಭೈರೇಗೌಡ :- ನಿಮ್ಮ ಕಾಲದಲ್ಲಿ ರೈತನಿಗೆ ಏನಾದರೂ ಸ್ಮರಿಸತಕ್ಕ ಕೆಲಸ ಆಗಬೇಕೆಂದಿದ್ದರೆ ಈ ಸಂಸ್ಕರಣೆಗೆ ಪ್ರಾಧಾನ್ಯತೆಯನ್ನು ದಯವಿಟ್ಟು ಕೊಡಿ. ಬಯೋ ಟೆಕ್ನಾಲಜಿಗೆ

ಕೊಡುತ್ತಿದ್ದೀರಿ, ನಾನು ಅದರ ಬಗ್ಗೆ ಮೆಚ್ಚಿಗೆ ಸೂಚಿಸುತ್ತೇನೆ. ಅದು ಇವತ್ತಿನದಿವಸ ಅವಶ್ಯಕತೆ ಇದೆ. ನಾವು ಪ್ರಪಂಚದಿಂದ ಪ್ರತ್ಯೇಕವಾಗಿರುವುದಕ್ಕೆ ಆಗುವುದಿಲ್ಲ. ಇದನ್ನು ನಾನು ಒಪ್ಪುತ್ತೇನೆ. ಅದೇ ರೀತಿಯಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆ ಮಾಡಬೇಕಾಗಿರತಕ್ಕಂಥ ಅವಶ್ಯಕತೆ ಇವತ್ತಿನ ದಿವಸ ಇದೆ. ನಮ್ಮ ರಾಜ್ಯದಲ್ಲಿ ಇವತ್ತು ಈ ತೋಟಗಾರಿಕಾ ಬೆಳೆಗಳಿಗೆ ಬಹಳ ಪ್ರಾಶಸ್ತ್ಯವಾದ ವಾತಾವರಣ ಇದೆ. ನಮ್ಮ ರಾಜ್ಯದಲ್ಲಿ ಬೆಳೆಯದೇ ಇರತಕ್ಕ ಹಣ್ಣುಗಳು ಇಲ್ಲ. ಕೆಲವು ಎಕ್ಸಾಟಿಕ್ ಆಗಿರತಕ್ಕಂಥವುಗಳನ್ನು ಬಿಟ್ಟರೆ ಉಳಿದಂಥ ಎಲ್ಲಾ ಹಣ್ಣುಗಳನ್ನು ಮತ್ತು ತರಕಾರಿಗಳನ್ನು ಬೆಳೆಯತಕ್ಕಂಥ ವಾತಾವರಣ ಮತ್ತು ಅವಕಾಶ ನಮ್ಮ ರಾಜ್ಯದಲ್ಲಿ ಇದೆ. ಆದರೆ, ಸಂಸ್ಕರಣೆ ವಿಚಾರದಲ್ಲಿ ಮಾತ್ರ ನಾವು ಸೊನ್ನೆ ಅಕಸ್ಮಾತ್ ಏನೋ ಸ್ವಲ್ಪ ಮಟ್ಟಿಗೆ ಸಂಸ್ಕರಣೆಗೆ ಒಳಪಡುತ್ತಾ ಇದೆ. ಅದನ್ನು ಹೆಚ್ಚಿಗೆ ಬಲಪಡಿಸಬೇಕಾಗಿರುವುದು ಅವಶ್ಯಕತೆ ಇದೆ. ಅದರಿಂದ, ನಾನು ಹೇಳಿರತಕ್ಕಂಥ ಕೆಲವು ವಿಚಾರಗಳನ್ನು ತಾವು ತಿದ್ದುಪಡಿ ತರುವುದರ ಮೂಲಕ ಅಳವಡಿಸಬೇಕು. ಈಗ ತಾವೇನು ತರಬೇಕೆಂದು ಹೊರಟಿದ್ದೀರಿ, ಈ ಹೆಜ್ಜೆಗಳನ್ನು ಹಿಂದೆ ಇಡಬೇಕೆಂಬ ಮನವಿಯನ್ನು ಮಾಡಿ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ :- ವಿಧೇಯಕದ ಮೇಲಿನ ಚರ್ಚೆ ನಾಳೆಗೆ ಮುಂದುವರಿಯುತ್ತದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 15 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 25.3.03ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು.)

11. ಅನುಬಂಧ - I

ಸೂಳ್ಯ ತಾಲ್ಲೂಕಿನಲ್ಲಿ ಚಾಲ್ತಿಯಲ್ಲಿರುವ ಬೀಡಿಗಳು

1734 (2233) ಶ್ರೀ ಅಂಗಾರ ಎಸ್. (ಸುಳ್ಯ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರು ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು.

ಆ) ಸುಳ್ಯ ತಾಲ್ಲೂಕಿನಲ್ಲಿರುವ ಬೀಡಿ ಕಾರ್ಮಿಕರು ಯಾವ ಯಾವ ಬೀಡಿ ಮಾರ್ಕಿನ ಬೀಡಿಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದಾರೆ.

ಇ) ಸುಳ್ಯ ತಾಲ್ಲೂಕಿನಲ್ಲಿ ಯಾವ ಯಾವ ಮಾರ್ಕಿನ ಬೀಡಿಗಳು ಚಾಲ್ತಿಯಲ್ಲಿವೆ.

ಶ್ರೀ ಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ)

ತಾಲ್ಲೂಕು	ಬೀಡಿ ಕಾರ್ಮಿಕರ ಸಂಖ್ಯೆ
1. ಮಂಗಳೂರು	1,11,091
2. ಭಂಟ್ವಾಳ	39,531
3. ಬೆಳ್ತಂಗಡಿ	9,112
4. ಪುತ್ತೂರು	27,699
5. ಸುಳ್ಯ	3,039
ಒಟ್ಟು	1,90,427